K.L.E. Society's

# ARTS AND COMMERCE COLLEGE

K.L.E's Campus, Hatalageri Naka, Gadag-Betageri -582101
Karnataka (India).
(3rd Cycle Re-Accreditation with "B++" by NAAC)

## Proceedings of
ICHR Sponsored
One Day National Seminar
On

# Desagati Principalities of Bombay Karnataka
(1565-1947 A.D.)

Date: 4th October, 2019

# ANAVARANA

Printing & Published by:
K.L.E.Society's
Arts and Commerce College, Gadag

EDITORS

Dr. A. K. Math
Prof. S .N. Murashilli
Prof. S. R. Kulkarni
Prof. Vithal Koli

ISBN : 978-93-5391-210-9

# Proceedings of

## ICHR Sponsored

## One Day National Seminar

## On

# esagati Principalities of Bombay Karnataka

## (1565-1947 A.D.)

**Date: 4th October, 2019**

**Organised By**

**Internal Quality Assurance Cell**

K.L.E.Society's

**Arts and Commerce College**

(3rd Cycle Re-accreditation with B++ by NAAC)

Hatalageri Naka, Gadag-Betageri-582101

Karnataka State (India)

Web:www.klescollegegadag.org

E-mail: kleswcg@yahoo.com klesaccollege@gmail.com

Cell:9482547599.

**EDITORS**

: A. K. Math

of. S .N. Murashilli

Prof. S. R. Kulkarni

Prof. Vithal Koli

ISBN : 978-93-5391-210-9

**Copyright@2019**

All rights reserved. This book or any thereof may not be reproduced or used in any manner whatsoever without the permission of the publisher.

**ISBN 978-93-5391-210-9**

**Printed and Published by:**
**K.L.E's Arts and Commerce College,**
**Gadag.**
**Mob: 9482547599**

**Cover Page Design: Shri.Raja.H.Banda.**

**No part of these Proceedings may be reproduced or transmitted in any form or by any means including photo copying any information without the prior permission of the publisher.**

# INDEX


| Sl.No | Particulars | Pages |
|---|---|---|
| 01 | Committee | I |
| 02 | About the Society, College and Seminar | III |
| 03 | Programme Schedule | V |
| 04 | Report of the Semin £Àar | VII |
| 05 | Keynote Address-<br>Dr.R.M.Shadakshariah | IX |
| 06 | Index<br><br>Papers by Delegates | XXXIII<br><br>1 to 296 |
| 07 | Photo Gallery | - |

# ಬಾಗಲಕೋಟೆ ಜಿಲ್ಲೆಯ ದೇಸಗತಿ ಮನೆತನಗಳು

ಪ್ರೊ. ಎಸ್.ಆರ್. ನಾಗಣ್ಣವರ
ಇತಿಹಾಸ ಸಹಾಯಕ ಪ್ರಾಧ್ಯಾಪಕರು
ವಿ.ಎಂ.ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್. ಬೆಳ್ಳಿಹಾಳ
ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ. ಜಿ. ಬಾಗಲಕೋಟೆ

## ೧. ಪೀಠಿಕೆ

ಬ್ರಿಟಿಷರೊಂದಿಗೆ ಸ್ವತಂತ್ರಕ್ಕಾಗಿ ಹೋರಾಡಿ ವೀರಮರಣವನ್ನು ಹೊಂದಿದ ವೀರರ ನಾಡು. ಹಲಗಲಿಯ ಬೇಡರ ಬಂಡಾಯ ನಾಡಿನಲ್ಲಿಯೇ ಹೆಸರುವಾಸಿಯಾಗಿದೆ. ಆದಿಲ್‌ಷಾಹಿಗಳಿಂದ ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿ ದೇಸಾಯಿ, ದೇಶಮುಖ, ನಾಡಗೌಡರು, ಸರನಾಡಗೌಡರು, ಜಹಗೀರದಾರರು, ಪಟೇಲ ಎಂಬ ಹುದ್ದೆಗಳನ್ನು ಅಲಂಕರಿಸಿಕೊಂಡು ಜನರನ್ನು ರಕ್ಷಿಸುವ ಜವಾಬ್ದಾರಿಯನ್ನು ಹೊತ್ತುಕೊಂಡು ಜನಪರ ಕಾರ್ಯಗಳನ್ನು ನಿರ್ವಹಿಸಿದ ದೇಸಗತಿ ಮನೆತನಗಳನ್ನು ಹೊಂದಿದ ಜಿಲ್ಲೆ ಇದಾಗಿದೆ. ಬಾಗಲಕೋಟೆ ಜಿಲ್ಲೆಯಲ್ಲಿ ಆಳಿಹೋದ ದೇಸಗತಿ ಮನೆತನದವರ ಪರಿಚಯ ಮಾಡಿಕೊಡುವುದೇ ಈ ಲೇಖನದ ಮುಖ್ಯ ಉದ್ದೇಶವಾಗಿದೆ.

## ೨. ದೇಸಗತಿ ಪದದ ಅರ್ಥ

ದೇಸಗತಿ ಎಂಬ ಪದದ ಅರ್ಥವನ್ನು ಅರಸುತ್ತಾ ಹೋದರೆ ಹಲವಾರು ಕವಲು ದಾರಿಗಳು ದೊರೆಯುತ್ತವೆ. 'ದೇಸಗತಿ' ಎಂಬ ಪದದಲ್ಲಿ ದೇಸ್ ಎಂಬ ಶಬ್ದವು ಸಂಸ್ಕೃತ ಶಬ್ದವಾಗಿದ್ದು, ಇದರ ತದ್ಭವ ರೂಪವೇ ದೇಶವಾಗಿದೆ. ಈ ದೇಶ ಎಂಬ ಶಬ್ದಕ್ಕೆ 'ಗತಿ' ಎಂಬ ಶಬ್ದವು ಸೇರಿಕೊಂಡು ದೇಸಗತಿ ಎಂಬ ಪದವು ನಿಷ್ಪನ್ನಹೊಂದಿದೆ.[೧] (ವೆಂಕಟಸುಬ್ಬಯ್ಯ, ಕನ್ನಡ ಇಂಗ್ಲೀಷ್ ನಿಘಂಟು, ೧೯೯೯, ಪು. ೩೭೯) ಈ ಪದವನ್ನು ಕನ್ನಡ ಶಬ್ದಕೋಶದಲ್ಲಿ ಅವಲೋಕಿಸಿದಾಗ 'ದೇಶ' ಎಂಬ ಶಬ್ದವನ್ನು ನಾಮಪದವಾಗಿ ಬಳಸಲಾಗಿದೆ. ಇದು ಸ್ಥಳ, ಪ್ರದೇಶ ಅಥವಾ ಆಡಳಿತದ ಸಪ್ತಾಂಗ ಸಿದ್ಧಾಂತದಲ್ಲಿ ಎಂದು ಭಾಗವಾಗಿ ಪರಿಚಯವಾಗುತ್ತದೆ.

1. ಒಂದು ನಿರ್ಧಿಷ್ಟವಾದ ಪ್ರದೇಶವನ್ನು ಹೊಂದಿ ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವದವರೆಗೆ ಆಡಳಿತ ವಿಕೇಂದ್ರೀಕರಣಗೊಂಡ ಜನಪದ ಸರಕಾರದ ಪ್ರಮುಖ ಸ್ಥಾನವೇ ದೇಸಗತಿ.
2. ರಾಜ ಮಹಾರಾಜರಿಂದ ಉಂಬಳಿ ಪಡೆದುಕೊಂಡು ಸಾಮ್ರಾಜ್ಯದಲ್ಲಿ ಭಾಗಶಃ ಸ್ವಾತಂತ್ರ್ಯವನ್ನು ಹೊಂದಿದ ಸಾಮಂತರ ಆಡಳಿತವೇ ದೇಸಗತಿ.
3. ಪ್ರಭುತ್ವಕ್ಕಿಂತ ಜನರ ಹಿತಕ್ಕಾಗಿ ಇರುವ, ಜನತೆಯ ಸಮೀಪವಿರುವ ಸಂಸ್ಥಾನಿಕರ ಆಡಳಿತವೇ ದೇಸಗತಿ.
4. ಜನರಿಗೆ ಸ್ಪಂದಿಸುತ್ತ ನಡೆಸಿದ ಗ್ರಾಮ ಸಮುದಾಯದ ಆಡಳಿತದ ಭಾಗವೇ ದೇಸಗತಿ.

ಹೀಗೆ ಒಂದು ಮೂಲದೇಸಗತಿ ಮನೆತನವು ದೇಸಾಯಿ ಮನೆತನವಾಗಿ ಹಾಗೂ ನಾಡಗೌಡ ಮನೆತನವಾಗಿ ಆದಿಲ್‌ಷಾಹಿಗಳ ಕಾಲದಿಂದ ಹಿಡಿದು ಪೇಶ್ವೆಗಳ ಕಾಲದ ಅವಧಿಯವರೆಗೆ ವಿವಿಧ ಭಾಗಗಳಲ್ಲಿ ಆಳಿದರು. ಆದರೆ ಮಹಾರಾಷ್ಟ್ರದಲ್ಲಿ ಪೇಶ್ವೆಗಳ ಆಡಳಿತ ಪತನಹೊಂದಿದ ನಂತರ ಅಲ್ಲಿನ ಚಿತ್ಪಾವನ ಬ್ರಾಹ್ಮಣ ಮನೆತನದವರು ಈಗಿನ ಉತ್ತರ ಕರ್ನಾಟಕ ಭಾಗಕ್ಕೆ ವಲಸೆ ಬಂದು ನೆಲೆನಿಂತರು. ನಿಧಾನವಾಗಿ ಆಡಳಿತದ ಹಿಡಿತ ಗೊತ್ತಿರುವ ಕಾರಣ ಇಲ್ಲಿನ ಜನರನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಂಡು ಅವರೊಂದಿಗೆ ಸ್ಥಳೀಯ ಭಾಷೆಯನ್ನು ಕಲಿತುಕೊಂಡು ಯಜಮಾನ್ಯವನ್ನು ಸ್ಥಾಪಿಸಿದರು. ಮಧ್ಯಕಾಲೀನ ಅವಧಿಯಲ್ಲಿ ಸ್ಥಳೀಯ ಆಡಳಿತದ ಮುಂದಾಳತ್ವವನ್ನು ವಹಿಸಿಕೊಂಡಿದ್ದ ಇವರಿಗೆ ದೇಸಾಯಿ, ದೇಸಮುಖ, ನಾಡಗೌಡ, ಸರನಾಡಗೌಡ ಮತ್ತು ಒಡೆಯರ ಎಂದೂ ಕರೆಯುತ್ತಿದ್ದರು.

## ೩. ಬಾಗಲಕೋಟೆ ಜಿಲ್ಲೆಯ ದೇಸಗತಿ ಮನೆತನಗಳ ವಿಧಗಳು

ದೇಸಗತಿ ಮನೆತನಗಳ ಬಗೆಗಳನ್ನು ಕುರಿತಾಗಿ ಚರ್ಚಿಸುವ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳು ಕಂಡುಬಂದರೂ ಅವರ ಜಾತಿಯ ಆಧಾರದ ಮೇಲೆ ಗುರುತಿಸಲು ಪ್ರಯತ್ನಿಸಲಾಗಿದೆ. ಇದು ಕೇವಲ ಅಧ್ಯಯನದ ಅನುಕೂಲತೆಗಾಗಿ ಹಾಕಿಕೊಂಡಿರುವ ಬಗೆಗಳೇ ವಿನಃ ಯಾವುದೇ ವೈಜ್ಞಾನಿಕ ಅಡಿಪಾಯದ ಮೇಲೆ ಅಲ್ಲ. ಆದುದರಿಂದ ದೇಸಗತಿ ಮನೆತನಗಳ ಸ್ವರೂಪ ಹಾಗೂ ಆಡಳಿತವನ್ನು ಅರಿತುಕೊಳ್ಳಲು ಸಾಧ್ಯವಾಗಬಹುದಾಗಿದೆ. ಬ್ರಾಹ್ಮಣ ದೇಸಾಯಿ ಮನೆತನಗಳು : ಬಾಗಲಕೋಟೆ ಜಿಲ್ಲೆಯ ಮನ್ನಿಕೇರಿ ದೇಸಾಯಿ.

 ISBN: 978-93-5391-210-9

ಜೈನ ದೇಸಾಯಿ ಮನೆತನಗಳು : ಬಾಗಲಕೋಟೆ ಜಿಲ್ಲೆಯ ತೇರದಾಳ, ಹನಗಂಡಿ ಮತ್ತು ಹಳಂಗಳ ದೇಸಾಯಿಗಳು. ಕ್ಷತ್ರಿಯ ದೇಸಾಯಿ ಮನೆತನಗಳು : ಬಾಗಲಕೋಟೆ ಜಿಲ್ಲೆಯ ಜಾಲಿಹಾಳದ ದೇಸಾಯಿಗಳು. ರಡ್ಡಿ ದೇಸಾಯಿ ಮನೆತನಗಳು : ಬೀಳಗಿ, ಹುನಗುಂದ, ಬಾದಾಮಿ ತಾಲೂಕಿನ ದೇಸಾಯಿಗಳು.

ಬಾಗಲಕೋಟೆ ಜಿಲ್ಲೆಯಲ್ಲಿ ಸುಮಾರು ೨೭ ದೇಸಗತಿ ಮನೆತನಗಳು ಆದಿಲ್‌ಶಾಹಿ ಹಾಗೂ ಮರಾಠರ ಆಳ್ವಿಕೆಯ ಕಾಲದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಬಾದಾಮಿ ತಾಲೂಕಿನಲ್ಲಿ ಐದು, ಬಾಗಲಕೋಟೆ ತಾಲೂಕಿನಲ್ಲಿ ಮೂರು, ಹುನಗುಂದ ತಾಲೂಕಿನಲ್ಲಿ ೧೦, ಬೀಳಗಿ ತಾಲೂಕಿನಲ್ಲಿ ನಾಲ್ಕು, ಮುಧೋಳ ಹಾಗೂ ಜಮಖಂಡಿ ತಾಲೂಕಿನಲ್ಲಿ ತಲಾ ಎರಡೆರಡು ದೇಸಗತಿ ಮನೆತನಗಳು ಇದ್ದವೆಂಬುದನ್ನು ಇದುವರೆಗೂ ಸಂಶೋಧನೆ ಮಾಡಿದ ಸಂಶೋಧಕರ ಅಧ್ಯಯನದಿಂದ ತಿಳಿದುಬಂದಿದೆ. ಈ ಕುರಿತಾದ ಪಟ್ಟಿಯನ್ನು ತಾಲೂಕಾವಾರು ಈ ಕೆಳಗಿನಂತೆ ಕೊಡಲಾಗಿದೆ.

೪. ಬಾಗಲಕೋಟೆ ಜಿಲ್ಲೆಯ ತಾಲೂಕಾವಾರು ದೇಸಗತಿ ಮನೆತನಗಳ ಪಟ್ಟಿ

| ದೇಸಾಯಿ ಮನೆತನಗಳು | ತಾಲೂಕು | ಜಾತಿ | ವತನ ಗ್ರಾಮಗಳ ಸಂಖ್ಯೆ | ವತನ ಸಂಪಾದಿಸಿದವರು |
|---|---|---|---|---|
| ಜಾಲಿಹಾಳ | ಬಾದಾಮಿ | ಕ್ಷತ್ರಿಯ | ೮೧ ಗ್ರಾಮಗಳು | ನಾರಾಯಣ ಒಡೆಯರು, ರಾಮರಾವ್ ಒಡೆಯರು, ಕೃಷ್ಣಪ್ಪ ಒಡೆಯರು |
| ನೀರಬೂದಿಹಾಳ ದೇಸಗತಿ | ಬಾದಾಮಿ | ಕ್ಷತ್ರಿಯ | ೧೨೦. ಗ್ರಾಮಗಳು | ಬಸವಪ್ರಭು |
| ಪಟ್ಟದಕಲ್ಲು ದೇಸಗತಿ | ಬಾದಾಮಿ | ಕ್ಷತ್ರಿಯ | ೦೭ | ಶೇಷ ಲಮಾಣಿ |
| ಕೆರಕಲಮಟ್ಟಿ ದೇಸಗತಿ | ಬಾದಾಮಿ | | ೦೭ | – |
| ಕೋಟೆಕಲ್ ದೇಸಗತಿ | ಬಾದಾಮಿ | ಕ್ಷತ್ರಿಯ | ೧೫ | ಗೋಸಲವೈದ |
| ಮನ್ನಿಕೇರಿ ದೇಸಗತಿ | ಬಾಗಲಕೋಟ | ಬ್ರಾಹ್ಮಣ | ೧೮ | ಲಕ್ಷ್ಮಣನಯ್ಯ |
| ಮನಹಳ್ಳಿ ದೇಸಗತಿ | ಬಾಗಲಕೋಟ | ಗಾಣಿಗ | ೦೭ | ಶಿವಲಿಂಗಸರ್ಜ |
| ಹೊನ್ನಿಹಾಳ | ಬಾಗಲಕೋಟ | ಗಾಣಿಗ | ೩೩೦ | ಬಸವಪ್ರಭು ಮತ್ತು ಮಲ್ಲಿಕಾರ್ಜುನ |
| ಗಿರಿಸಾಗರ | ಬೀಳಗಿ | ಕ್ಷತ್ರಿಯ | ೧೪ | ದಂಡಪ್ಪ ದೇಸಾಯಿ |
| ಸೊನ್ನ ದೇಸಗತಿ | ಬೀಳಗಿ | ರಡ್ಡಿ | ೧೪ | ದೊಮ್ಮರಡ್ಡಿ |
| ಸಿರಗುಪ್ಪಿ ದೇಸಗತಿ | ಬೀಳಗಿ | ಕ್ಷತ್ರಿಯ | – | ವೀರಪ್ಪ ನಾಯಕ |
| ಗಲಗಲಿ ದೇಸಗತಿ | ಬೀಳಗಿ | – | ೧೭ | ಸತ್ಯಪ್ಪ, ಅನ್ನಪ್ಪ, ಕಲ್ಲಪ್ಪ |
| ಐಹೊಳೆ ದೇಸಗತಿ | ಹುನಗುಂದ | ಕ್ಷತ್ರಿಯ | ೩೩೦ | – |
| ಕಂದಗಲ್ ದೇಸಗತಿ | ಹುನಗುಂದ | ರಡ್ಡಿ | ೦೭ | ಸಿಂಗಾರಡ್ಡಿ |
| ಗಂಜಿಹಾಳ ಜಹಗೀರದಾರ | ಹುನಗುಂದ | | – | |
| ಕರಡಿ ದೇಸಗತಿ | ಹುನಗುಂದ | ಗಾಣಿಗ | – | |
| ಅಮರಾವತಿ ದೇಸಗತಿ | ಹುನಗುಂದ | ರಡ್ಡಿ | ೧೭ | ರಾಮಪ್ಪ ದೇಸಾಯಿ |
| ಚಿತ್ತವಾಡಗಿ ನಾಡಗೌಡ | ಹುನಗುಂದ | ರಡ್ಡಿ | – | |
| ಹುನಗುಂದದ ಹವಾಲ್ದಾರ | ಹುನಗುಂದ | | | |
| ಮರೋಳದ ದೇಶಮುಖ | ಹುನಗುಂದ | ರಡ್ಡಿ | ೪೪ | ಮಲ್ಲಭೂಪಾಲ ದೇಶಮುಖ |
| ಹುಲಗಿನಾಳ ದೇಶಮುಖ | ಹುನಗುಂದ | | | |


ISBN: 978-93-5391-210-9

| | | | | |
|---|---|---|---|---|
| ಕೆಲೂರು ನಾಡಗೌಡ | ಹುನಗುಂದ | ರಡ್ಡಿ | | ಮಂಟೆಪ್ಪಗೌಡ ನಾಡಗೌಡ |
| ಕುಳಲಿ ದೇಸಗತಿ | ಮುಧೋಳ | | ೩೫ | ಬಾಲಪ್ಪ ದೇಸಾಯಿ |
| ಲೋಕಾಪುರ ದೇಸಗತಿ | ಮುಧೋಳ | ಕ್ಷತ್ರಿಯ | ೨೩ ೪ | - |
| ತೇರದಾಳ ದೇಸಗತಿ | ಜಮಖಂಡಿ | ಜೈನ | ೩೩ | ಕೃಷ್ಣಪ್ಪ |
| ಕೊಣ್ಣೂರು ದೇಸಗತಿ | ಜಮಖಂಡಿ | - | ೨೫ | ನಂದಿಬಸಪ್ಪ |

ಬಾಗಲಕೋಟೆ ಜಿಲ್ಲೆಯ ವಿವಿಧ ಭಾಗಗಳಲ್ಲಿ ದೊರೆತಿರುವ ಶಾಸನಗಳಲ್ಲಿಯೂ ದೇಸಗತಿಗಳು ನೀಡಿದ ದಾನದ ವಿವರಗಳು ಲಭ್ಯವಾಗಿವೆ. ಗದ್ದನಕೇರಿ ಗ್ರಾಮದಿಂದ ಬಾಗಲಕೋಟೆಗೆ ಹೋಗುವ ರಸ್ತೆಯ ಬದಿಯಲ್ಲಿ ದೊರೆತಿರುವ ೧೬ನೆಯ ಶತಮಾನದ ಶಾಸನದಲ್ಲಿ ರಾಘವಜಿ ಭೀಮಪ್ಪ ದೇಸಾಯಿ ಕೆರೆ ಕಟ್ಟಲು ಭೂಮಿಯನ್ನು ದಾನ ಮಾಡಿದ ಎಂಬ ದಾಖಲೆ ಕಾಣಸಿಗುವುದು. (ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೯. ಬಾಗಲಕೋಟೆ, ನಂ. ೨೨. ಪು. ೧೫) ಅದರಂತೆ ಸೋರಕೊಪ್ಪ ಗ್ರಾಮದ ಬಾಗಿಲಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ ಬರೆಯಲಾದ ೧೫ನೆಯ ಶತಮಾನದ ಶಾಸನವೊಂದರಲ್ಲಿ ದೇಸಾಯಿ ಎಂಬ ಉಲ್ಲೇಖವಿದೆ. (ಅದೇ, ನಂ. ೨೬, ಪು. ೧೯). ಅದರ ಪಠ್ಯ ಇಂತಿದೆ_

೧. ಸೂರ್ಯ ಚಂದ್ರ
೨. ರುವ್ವಳ್ಳ ಹರಿ
೩. ಸಾಯಿ ಯಂತಲು
೪. ಶ್ರೀಮತು
೫. ಬರಿಗೆ ಮಲ್ಲನಾಯಕ
೬. ..........ದೇ

**೫.೧. ಜಾಲಿಹಾಳದ ದೇಸಗತಿ ಮನೆತನ**

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಜಾಲಿಹಾಳವು ಒಂದು ದೇಸಗತಿ ಆಡಳಿತಕ್ಕೆ ಒಳಪಟ್ಟ ಪ್ರದೇಶವಾಗಿದೆ. ಈ ದೇಸಗತಿ ಮನೆತನದ ದೇಸಾಯಿಯರು ಕ್ರಿ.ಶ. ೧೭೭೬ರಲ್ಲಿ ಹುಬ್ಬಳ್ಳಿಯ ಬಳಿಯ ಸಂಶಿಯ ಗ್ರಾಮದಲ್ಲಿ ಹೈದರಲಿ ಹಾಗೂ ಮರಾಠಾ ಪೇಶ್ವೆಯರ ನಡುವೆ ಜರುಗಿದ ಹೋರಾಟದಲ್ಲಿ ಪೇಶ್ವೆಯರ ಪರವಾಗಿ ಹೋರಾಟ ಮಾಡಿದ ಮಾಹಿತಿಯು ಇತಿಹಾಸದ ದಾಖಲೆಗಳಿಂದ ತಿಳಿಯುವುದು. (ಧಾರವಾಡದ ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ ರಚಿತ. ಒಂದಿನ ಮುಂಬಯಿ ರಾಜ್ಯದ ೧೯೪೫-೫೦ ಕನ್ನಡ ಪ್ರಾಥಮಿಕ ಶಾಲೆಗಳ ಮೇಲ್ವರ್ಗಗಳ ಇತಿಹಾಸ ಪಠ್ಯಪುಸ್ತಕ) ಜಾಲಿಹಾಳದ ಸನಿಹದಲ್ಲಿರುವ ಬೇಲೂರು ಈ ದೇಸಾಯಿಯರ ರಾಜಧಾನಿ ಕೇಂದ್ರವಾಗಿತ್ತು. ಬಾಗಲಕೋಟೆ ತಾಲೂಕಿನ ಶಿರೂರದ ದೇಸಾಯಿ ಅಸಹಾಯಕನಾಗಿದ್ದ ಬೇಲೂರು ದೇಸಾಯಿಯ ಅಭಿಲಾಷೆಯ ಮೇರೆಗೆ ಹುಲ್ಲೂರಿನ ಬೇಡ ಬಂಟರನ್ನು ನಂಬಿಸಿ ಅವರ ನೆಲೆಯನ್ನು ಮೋಸದಿಂದ ನಾಶಮಾಡಿ ಬೇಲೂರು ಸಂಸ್ಥಾನವನ್ನು ಪಡೆದು ಜಾಲಿಹಾಳಕ್ಕೆ ರಾಜಧಾನಿಯನ್ನು ವರ್ಗಾಯಿಸಿದನೆಂದು ತಿಳಿಯುವುದು. ಈ ಮನೆತನದ ಮೂಲಪುರುಷ ನಾರಾಯಣ ಒಡೆಯರ ಕ್ರಿ.ಶ. ೧೪೩೨ರಲ್ಲಿ ಅಧಿಕಾರ ಪಡೆದುಕೊಂಡಿದ್ದರು. (ಬಾಗಲಕೋಟೆ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ : ದೇವೇಂದ್ರ ಮಾಧವನವರ ಅವರ ಜಾಲಿಹಾಳ ಸಂಸ್ಥಾನ ಎಂಬ ಲೇಖನ. ಪು. ೫೮೯-೫೯೮).

ಜಾಲಿಹಾಳದ ದೇಸಾಯಿಯವರಿಗೆ ಆನೆಗುಂದಿ ಅರಸರು ಮುಖ್ಯ ಕಸಬಾ ಏಳು, ನಾಲವತ್ತ ಮೂರು ಚಾವರಾತ ಹಳ್ಳಿಗಳು, ಮೂವತ್ತೊಂಬು ಜಾಲಸಾತ್‌ಗಳು ಸೇರಿ ಒಟ್ಟು ೮೧ ಗ್ರಾಮಗಳನ್ನೊಳಗೊಂಡ ದೇಸಗತಿ ಮನೆತನ ಇದಾಗಿತ್ತು. ದೇಸಗತಿ ಅಧೀನಕ್ಕೆ ಒಳಪಟ್ಟ ಗ್ರಾಮಗಳನ್ನು ಚಾವರಾತ ಹಳ್ಳಿಗಳು ಎಂದು ಕರೆಯಲಾಗುತ್ತಿತ್ತು. (ಕಲ್ಯಾಣಿ ಸಂಗಮೇಶ, ಬಾಗಲಕೋಟೆ ಜಿಲ್ಲೆಯ ದೇಸಗತಿಗಳು) ಉತ್ತಮ ಆಡಳಿತಗಾರರಾಗಿದ್ದ ಜಾಲಿಹಾಳದ ದೇಸಾಯಿಗಳ ಆಡಳಿತದಲ್ಲಿ ಸುರನೀಸ, ಫಡನೀಸ, ಚಾಸನೀಸ, ಸಬನೀಸ ಮತ್ತು ಚಟ್ನೀಸರೆಂಬ ಕಾರಭಾರಿಗಳು ಕಾರ್ಯನಿರ್ವಹಿಸುತ್ತಿದ್ದರು. ಇಂದಿಗೂ ಈ ಹೆಸರಿನ ಮನೆತನಗಳು ಈ ಊರಿನಲ್ಲಿವೆ. ಗಿರಿತಮ್ಮಣ್ಣನವರ ಎಂಬವರು ಈ ಮನೆತನದ ಆಳ್ವಿಕೆಯಲ್ಲಿ ಸಯ್ಯದ ಮುಖ್ಯಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದರು. ಕ್ರಿ.ಶ. ೧೮೪೯ ರ ಕೈಫಿಯತ್ತಿನಲ್ಲಿ ಮೂಳ ವತನದ ಜಾಗಾ ನಾಯಿಕ ಶಿರೂರ, ತಾ.ಬಾಗಲಕೋಟ ಎಂಬ ದಾಖಲೆಯಿರುವುದರಿಂದ ಇವರು ಮೂಲತಃ ಬಾಗಲಕೋಟೆ ತಾಲೂಕಿನ ಶಿರೂರಿನವರು ಎಂಬುದು ಸ್ಪಷ್ಟ. ಬೇಲೂರಿನ ಮೊದಲ ಹೆಸರು 'ಬೇಲುಗಿರ' ಎಂಬುದಾಗಿತ್ತು. ಈ ಮನೆತನದಲ್ಲಿ ರಾಮರಾವ್ ಒಡೆಯರ (೧೪೩೨-೧೬೭೪), ಕೃಷ್ಣರಾವ್ ಒಡೆಯರ (೧೬೭೪-

 ISBN: 978-93-5391-210-9

೧೪೬೫), ಅಚ್ಚಪ್ಪ ಒಡೆಯರ (೧೪೬೫-೧೫೩೬), ತಿಮ್ಮನ್ನನಾಯಕ ಒಡೆಯರ (೧೫೩೬-೧೫೭೫) ಅನ್ನದಾನ ಕೃಷ್ಣಪ್ಪ ನಾಯ್ಕ ದೇಸಾಯಿ (೧೫೭೫-೧೬೦೫), ಗುಡ್ಡದ ತಿಮ್ಮಪ್ಪಾನಾಯ್ಕ ದೇಸಾಯಿ (೧೬೦೫-೧೬೩೬), ನರಸಪ್ಪನಾಯ್ಕ ದೇಸಾಯಿ (೧೬೩೬-೧೬೭೨), ಮುರಾರಿನಾಯ್ಕ ದೇಸಾಯಿ (೧೬೭೨-೧೬೮೭) ಹೀಗೆ ಹಲವಾರು ನಾಯ್ಕ ದೇಸಾಯಿಗಳು ರಾಜ್ಯಭಾರ ನಿರ್ವಹಿಸಿದರು. (ಬಾಗಲಕೋಟೆ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ದೇವೇಂದ್ರ ಮಾಧವನವರ ಅವರ ಜಾಲಿಹಾಳ ಸಂಸ್ಥಾನ ಎಂಬ ಲೇಖನ. ಪು. ೫೪೯-೫೯೮) ಈ ಜಾಲಿಹಾಳ ೧೮೮ ಹಳ್ಳಿಗಳ ಸಂಸ್ಥಾನವಾಗಿತ್ತು ಎಂಬ ಮಾಹಿತಿಗಳು ಇವೆ. ಸಂಸ್ಥಾನದ ಗಡಿಭಾಗದಲ್ಲಿ ಇಂದಿನ ಯಲಬುರಗಿ (ಪರಗಣಾ), ನರೆಗಲ್, ಅಬ್ಬಿಗೇರಿ, ಸಂದಿಗವಾಡ, ಯಾವಗಲ್, ಅರಹುಣಸಿ, ಮೆಣಸಿಗಿ, ಎರೆಬೂದಿಹಾಳ, ನವಿಲುಹೊಳಿ, ಬಾದಾಮಿ, ಕೆರೂರ, ಶಿರೂರು, ಗುಳೇದಗುಡ್ಡ, ಕಲ್ಲಿಗ್ರಾಮ, ರುದ್ರಾಪೂರ ಇವುಗಳಿದ್ದವು ಎಂದು ಅಲ್ಲದೇ ನರಗುಂದ, ಡಂಬಳ, ಬಾಗಲಕೋಟೆ ಎಂದು ಪತ್ರದಲ್ಲಿ ಉಲ್ಲೇಖಿವಿದೆ. (ಅದೇ, ಪು. ೫೯೩-೫೯೪).

**೫.೨. ಮನ್ನಿಕೇರಿಯ ದೇಸಗತಿ**

ಬಾಗಲಕೋಟೆ ತಾಲೂಕಿನ ಮನ್ನಿಕೇರಿ ಒಂದು ಚಿಕ್ಕಗ್ರಾಮವಾಗಿದ್ದು, ಕ್ರಿ.ಶ. ೧೭ನೆಯ ಶತಮಾನದಲ್ಲಿ ದೇಸಗತಿ ಮನೆತನದ ಆಡಳಿತದ ಕೇಂದ್ರವಾಗಿತ್ತು. ಕ್ರಿ.ಶ. ೧೬೦೦ರ ಸುಮಾರಿನಲ್ಲಿ ಆದಿಲ್‌ಷಾಹಿಗಳಿಂದ ಲಕ್ಕಸದನಯ್ಯ ಎಂಬವನು ದೇಸಗತಿ ಅಧಿಕಾರವನ್ನು ಪಡೆದುಕೊಂಡು ಅಧಿಕಾರ ನಿರ್ವಹಿಸುತ್ತಿದ್ದನು. ಈತನ ಅಧೀನದಲ್ಲಿ ಬಾಗಲಕೋಟೆಯ ಗದ್ದನಕೇರಿ, ಅಚನೂರ, ಸಂಗಮ, ಮಂಕಣಿ, ಮುಚಖಂಡಿ, ಮುರನಾಳ, ಯಡಹಳ್ಳಿ, ಸೀಮೀಕೆರೆ, ಮನ್ನಿಕೇರಿ, ಮುಗಳಖೋಡ, ಸುತಗುಂಡಾರ, ಮುಗಳೊಳ್ಳಿ, ರಾಂಪೂರ, ದಾಸನಕೊಪ್ಪ ಮುಂತಾದ ಗ್ರಾಮಗಳು ಇದ್ದವು. ಆದರೆ ಕ್ರಮೇಣ ಸಂಬಂಧಿಗಳ ಆಂತರಿಕ ಕದನಗಳಿಂದ ತಮ್ಮ ತಮ್ಮಲ್ಲಿಯೇ ಭಿನ್ನತೆಗಳು ಉಂಟಾಗಿ ಇಲ್ಲಿಯ ಅಧಿಕಾರವು ಕೆಲವು ಅವಧಿಯವರೆಗೆ ಪೇಶ್ವೆಗಳ ಅಧೀನಕ್ಕೆ ಬಂದಿತ್ತು. ಮುಂದೆ ಸವನೂರಿನ ನವಾಬರ ಮಧ್ಯಸ್ತಿಕೆಯ ಫಲವಾಗಿ ದೇಸಗತಿ ಅಧಿಕಾರ ಪುನಃ ಮನ್ನಿಕೇರಿಯ ದೇಸಾಯಿಗಳಿಗೆ ದೊರೆಯಿತು.

**೫.೩. ಸೊನ್ನದ ದೇಸಗತಿ**

ಕ್ರಿ.ಶ. ೧೫೬೫ ಜನೇವರಿ ೨೩ರಂದು ವಿಜಯನಗರದ ಅರಸ ರಾಮರಾಯನಿಗೂ ಹಾಗೂ ಷಾಹಿಸುಲ್ತಾನರಿಗೂ ಜರುಗಿದ ರಕ್ಕಸಗಿ-ತಂಗಡಗಿ ಕಾಳಗದಲ್ಲಿ ಆದಿಲ್‌ಷಾಹಿಗಳ ಪರವಾಗಿ ಭಾಗವಹಿಸಿದ್ದರಿಂದ ಸೊನ್ನದ ಬೊಮ್ಮರಡ್ಡಿ ಎಂಬಾತನಿಗೆ ಆದಿಲ್‌ಷಾಹಿ ಅರಸರು ಇನಾಂನ್ನು ನೀಡಿದರು. ಇವರು ನೀಡಿದ ಇನಾಮ್ ಪಡೆದುಕೊಂಡು ಬಾಗಲಕೋಟೆಯಲ್ಲಿ ನೆಲೆಸಿದರು. ಇನಾಮ್ ಪಡೆದ ಯುವಕನ್ನು ಜನರು ಜಗ್ಗರಣೆಯ ಜಂಗಿ ಸಾವಕಾರ ಎಂದು ಕರೆಯಲಾರಂಭಿಸಿದರು. ಸುತ್ತಮುತ್ತಲಿನ ಕೆಲವು ಗ್ರಾಮಗಳ ಗೌಡಕಿಯ ಜವಾಬ್ದಾರಿಯನ್ನು ಪಡೆದುಕೊಂಡು ಕ್ರಮೇಣ ಸೊನ್ನ ಗ್ರಾಮಕ್ಕೆ ಬಂದು ನೆಲೆಸಿ ಸೊನ್ನದ ದೇಸಾಯಿಗಳೆಂದು ಪ್ರಸಿದ್ಧರಾದರು. ಇನಾಮ್ ಆಯೋಗದ ದಾಖಲೆಗಳ ಪ್ರಕಾರ ಈ ದೇಸಾಯಿಗಳು ಆದಿಲ್‌ಷಾಹಿಗಳು ಮತ್ತು ಘೋರ್ಪಡೆ ಸರಕಾರದಿಂದ ಪಡೆದಿರುವ ಮೌಜೆಸೊನ್ನ, ಬಳ್ಳೂರು, ಇಗಿರಿಗಾವ, ಮೌಜೆಗುಡದಿನ್ನಿ, ಮೌಜೆದೋಡಿಪಾಳ, ಮೌಜೆಕೊಂಡಿಕಲ್ಲ, ಕಸಬಾ-ಬೀಳಗಿ, ಮೌಜೆಬಾಡಗಂಡಿ, ಕೊರ್ಚಿ, ಗರಡದಿನ್ನಿ, ಮೌಜೆಥವಳೇಶ್ವರ, ಹಂಚಿನಾಳ, ತೆಗ್ಗಿ, ಮುಂತಾದ ೧೪ ಗ್ರಾಮಗಳ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದರು. (ಅದೇ. ಪೂರ್ವೋಕ್ತ).

**೫.೪. ಹೊನ್ನಿಹಾಳ ದೇಸಗತಿ**

ಗಾಣಿಗ ಮನೆತನಕ್ಕೆ ಸೇರಿದ ಬಸವಪ್ರಭು ಮತ್ತು ಮಲ್ಲಿಕಾರ್ಜುನ ಪ್ರಭುಗಳು ಆದಿಲ್‌ಷಾಹಿಗಳಿಂದ ನಾಡಗೌಡಕಿ ಜವಾಬ್ದಾರಿಯನ್ನು ವಹಿಸಿಕೊಂಡು ೩೩೦ ಗ್ರಾಮಗಳ ಮೇಲೆ ಅಧಿಕಾರ ನಿರ್ವಹಿಸುತ್ತಿದ್ದರು. ಕ್ರಿ.ಶ. ೧೮೬೮-೬೯ರ ಕಾಲಾವಧಿಯಲ್ಲಿ ಬ್ರಿಟಿಷರಿಂದ ಪಡೆದುಕೊಂಡು ಸನದುಗಳ ಪ್ರಕಾರ ಹೊನ್ನಿಹಾಳದ ದೇಸಗತಿಯವರು ಹವೇಲಿ, ಮೌಜೆಚೌಡಾಪುರ, ಮೌಜೆ ಮಡುವಿನಕೊಪ್ಪ, ಬಾಗಲಕೋಟೆ ಎಂಬ ಐದು ಗ್ರಾಮಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡರು ಎಂಬ ದ್ವಾಖಲೆಗಳಿವೆ. ಬ್ರಿಟಿಷರ ಕಾಲದಲ್ಲಿ ಬಾಗಲಕೋಟೆಯ ಗೌಡಕಿಯೂ ಸಹ ದೊರೆಯಿತು. (ಕಲ್ಯಾಣಿ ಸಂಗಮೇಶ, ಬಾಗಲಕೋಟೆ ಜಿಲ್ಲೆಯ ದೇಸಗತಿಗಳು).

ವಿಜಯನಗರದ ಅರಸನಾದ ಪ್ರೌಢದೇವರಾಯನು ನಾಡಗೌಡರಿಗೆ ಕೃಷ್ಣಾ ಮತ್ತು ಘಟಪ್ರಭಾ ನದಿಗಳ ಎಡಬಲದ ಹಲವು ಗ್ರಾಮಗಳನ್ನು ಜಹಗೀರಾಗಿ ಹಾಕಿಕೊಟ್ಟು ಅವರನ್ನು ಹೊನ್ನಿಹಾಳದ ದೇಸಾಯಿಯರನ್ನಾಗಿ ನೇಮಿಸಿದನು. ಅಲ್ಲದೇ ಪಲ್ಲಕ್ಕಿ ಗೌರವವನ್ನು ಹಾಗೂ ಹಗಲು ದೀವಟಿಗೆ ಗೌರವವನ್ನು ನೀಡಿ ವಿಜಯನಗರದ ಅಧೀನದಲ್ಲಿರುವ ದೇಸಾಯಿಯರೆಂದು ಮನ್ನಣೆ ಮಾಡಿದನು. ಕ್ರಿ.ಶ. ೧೪೯೦ರಲ್ಲಿ ಬಸಪ್ಪ ನಾಡಗೌಡರು ಹೊನ್ನಿಹಾಳದ ದೇಸಗತಿಗೆ ಮೊದಲ ದೇಸಾಯಿಯರಾದರು. ಹದಿನೈದು ಸಾವಿರ ಕೂರಿಗೆಯಷ್ಟು ವಿಶಾಲ ಕ್ಷೇತ್ರದ ಜಮೀನು ಈ

 ISBN: 978-93-5391-210-9

ದೇಸಗತಿಯ ಆಸ್ತಿಯಾಯಿತು. (ನಾಗಣ್ಣವರ ಎಸ್.ಆರ್. (ಸಂ.), ದೇಸಗತಿ ಮನೆತನಗಳ ಕೊಡುಗೆಗಳು, ಪು. ೧೦೬–೧೧೨. ಕುಲಕರ್ಣಿ ಡಿ.ಜಿ., ಸಂಶೋಧನಾ ಲೇಖನ). ರಾಜಕೀಯ ಬದಲಾವಣೆಗಳಾದಂತೆ ಉತ್ತರದ ಮೊಘಲ ದೊರೆ ಔರಂಗಜೇಬನು ವಿಜಯಪುರದ ಸಿಕಂದರ್ ಆದಿಲ್‌ಷಾಹಿಯನ್ನು ಧಮನಮಾಡಿ ವಿಜಯಪುರವನ್ನು ಪಡೆದುಕೊಂಡ ಮೇಲೆ ಹೊನ್ನಿಹಾಳ ದೇಸಗತಿಯ ಅಧಿಕಾರವು ಮೊಘಲರ ಕೈಸೇರಿತು. ಆದಿಲ್‌ಷಾಹಿಗಳು ನೀಡಿದ ಹೊನ್ನಿಹಾಳ ದೇಸಗತಿಯನ್ನು ಮೊಘಲರು ಒಪ್ಪದೇ ರಹಸ್ಯವಾಗಿಟ್ಟ ಜಹಗೀರು ಪತ್ರ, ಮೊಹರುಗಳನ್ನು ವಶಪಡಿಸಿಕೊಳ್ಳಲು ಪುನಃ ಅವುಗಳನ್ನು ಪಡೆಯಲು ದಾಳಿಮಾಡಿ ಬಾಬನಗೌಡ ದೇಸಾಯಿಯರು ಅಧಿಕಾರ ಕಳೆದುಕೊಂಡರು. ಇವರ ಪತ್ನಿ ಹೊನ್ನಾಬಾಯಿ ಅಲ್ಲಿಂದ ಪಾರಾಗಿ ಹವೇಲಿ ಗ್ರಾಮಕ್ಕೆ ಬಂದು ಅಲ್ಲಿದ್ದ ಹುಸೇನ ಮತ್ತು ಮೆಹಬೂಬಿ ಎಂಬ ಮುಸ್ಲಿಂ ದಂಪತಿಗಳ ಆಶ್ರಯವನ್ನು ಪಡೆದುಕೊಂಡಳು ತುಂಬು ಗರ್ಭವತಿಯಾಗಿದ್ದರೂ ಆಶ್ರಯದಾತರ ಮನೆಯ ಮತ್ತು ಹೊಲಗಳಲ್ಲಿ ಜೀವನ ಸಾಗಿಸುತ್ತಾ ಕಾಲಕಳೆದಳು. ಇತ್ತ ಬಾಬಾಸಾಹೇಬನ ಸ್ಥಿತಿ ತುಂಬಾ ಬಿಗಡಾಯಿಸಿತು.

ಮುಂದೆ ಹೊನ್ನಾದೇವಿ ಗಂಡು ಮಗುವಿಗೆ ಜನ್ಮನೀಡಿದಳು ಮುಸ್ಲಿಂ ಮನೆಯಲ್ಲಿ ಜನಿಸಿದ್ದರಿಂದ ಆ ಮಗುವಿಗೆ ಫಕ್ರುಸಾಬ್ ಉರ್ಫ ದುಬ್ಬಣ್ಣ ಎಂದು ನಾಮಕರಣ ಮಾಡಿದರು. ಮುಂದೆ ಮಗುವಿನ ಜಾತಕ ಕುಂಡಲಿಯನ್ನು ತೆಗೆಯುವಾಗ ಹೊನ್ನಾದೇವಿ ಯಾರು ಎಂಬುದನ್ನು ತಿಳಿದ ಮುಸ್ಲಿಂ ದಂಪತಿಗಳು ತುಂಬಾ ನೊಂದುಕೊಂಡು ರಾಜಮಾತೆಯಾಗಿರುವ ತಮ್ಮಿಂದ ಮನೆಯ ಕೆಲಸಗಳನ್ನು ಮಾಡಿಸಿಕೊಂಡೆವು ಎಂಬ ನೋವು ಅವರನ್ನು ಕಾಡತೊಡಗಿತು. ಮುಗ್ಧಮನಸ್ಸಿನ ಹೊನ್ನಾದೇವಿಯೇ ಅವರನ್ನು ಸಮಾಧಾನ ಪಡಿಸಿದಳು. ಏಕೆಂದರೆ ಈ ಮುಸ್ಲಿಂ ಮನೆತನದ ಪೂರ್ವಜರು ಹೊನ್ನಾಳದ ದೇಸಗತಿಯ ಕುದುರೆಯ ಕಾವಲುಗಾರರಾಗಿ ಸೇವೆಸಲ್ಲಿಸಿದ್ದರು. ಕಾರಣ ತಮ್ಮ ಒಡತಿಯ ಈ ಸ್ಥಿತಿಯನ್ನು ಕಂಡು ಮರುಗಿದರಲ್ಲದೇ ರಾಜಮರ್ಯಾದೆಯಿಂದ ತಾಯಿ ಮತ್ತು ಮಗುವನ್ನು ಹೊನ್ನಾಳಕ್ಕೆ ಕರೆತಂದರಲ್ಲದೇ ಅವರೇ ಮುತವರ್ಜಿ ವಹಿಸಿ ಹೊನ್ನಾದೇವಿ ಮತ್ತು ದುಬ್ಬಣ್ಣ ಮತ್ತು ಬಾಬನಗೌಡರನ್ನು ವಿಜಯಪುರಕ್ಕೆ ಕರೆದುಕೊಂಡು ಹೋಗಿ ಮೊಗಲ್ ಬಾದಷಹನ ವಜೀರನಿಗೆ ಭೇಟಿ ಮಾಡಿಸಿ ಪುನಃ ಹೊನ್ನಾಳ ದೇಸಗತಿಯನ್ನು ಪಡೆದುಕೊಂಡರು. (ಆರ್. ಗೋಪಾಲ (ಸಂ.), ಬಾಗಲಕೋಟೆ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಕೆಂಗಲಗುತ್ತಿ ಎಸ್.ಡಿ. ಲೇಖನ : ಹೊನ್ನಾಳದ ದೇಸಗತಿ ಮನೆತನ, ಪು. ೫೯೯–೬೦೩). ಕ್ರಿ.ಶ. ೧೭೪೬ರಲ್ಲಿ ಹೊನ್ನಾದೇವಿ ಹಾಗೂ ಬಾಬನಗೌಡರ ಉದರದಲ್ಲಿ ಜನಿಸಿದ ದುಬ್ಬಣ್ಣಗೌಡ ಉರ್ಫ ಫಕ್ರುಸಾಹೇಬ ನಾಡಗೌಡನು ಹೊನ್ನಾಳದ ದೇಸಗತಿ ಗಾದೆಯನ್ನೇರಿದನು. ಈತನ ನಂತರ ಅಧಿಕಾರಕ್ಕೇರಿದ ಬಸನಗೌಡ ಬಾಗಲಕೋಟೆಯಲ್ಲಿ ವಾಡೆಯನ್ನು ನಿರ್ಮಿಸಿದನು. (ಅದೇ, ಪು. ೬೦೨). ನಂತರ ಕ್ರಿ.ಶ. ೧೭೭೦ರವರೆಗೂ ಮೊಘಲರ ವಶದಲ್ಲಿದ್ದ ವಿಜಯಪುರವನ್ನು ಮರಾಠ ಪೇಶ್ವೆಗಳು ವಶಪಡಿಸಿಕೊಂಡಿದ್ದರಿಂದ ಹೊನ್ನಾಳ ದೇಸಗತಿಯವರು ಪೇಶ್ವೆಗಳ ಸಾಮಂತರಾದರು. ಬ್ರಿಟಿಷರ ನಿಯಂತ್ರಣದಲ್ಲಿದ್ದ ಹಣಮಂತಗೌಡರಿಗೆ ಬ್ರಿಟಿಷ್ ಸರಕಾರ 'ಸರ' ಎಂಬ ಬಿರುದನ್ನು ನೀಡಿ ಗೌರವಿಸಿದರು. ಅಲ್ಲಿಂದ ಹೊನ್ನಾಳ ದೇಸಾಯಿಯರು ಸರನಾಡಗೌಡರೆಂದು ಪ್ರಸಿದ್ಧರಾದರು. ಅಪ್ಪಾಸಾಹೇಬರ ತರುವಾಯ ಉದಾರವಾದಿಯೂ, ಶಾಂತಸ್ವಭಾವದವರೂ ಆದ ಬಾಬಾಸಾಹೇಬ ಸರನಾಡಗೌಡರು ದೇಸಗತಿ ಗಾದಿಯನ್ನೇರಿದವರು. ಬಾಬಾಸಾಹೇಬರಿಗೆ ಕೊಲ್ಹಾರದ ಪ್ರೌಢರಾಯ ಅದೃಶ್ಯ ಕವಿಯ ವಂಶಜರಾದ ಗುರುಸಿದ್ದಪ್ಪಾ ದೇಸಾಯಿಯವರ ಮಗಳು ಗಂಗಮ್ಮಳನ್ನು ಕೊಟ್ಟು ಮದುವೆ ಮಾಡಲಾಯಿತು. ಇವರಿಂದ ಒಂದು ಗಂಡು ಮಗು ಜನಿಸಿತು ಅವರಿಗೆ ಇನೆಯ ಅಪ್ಪಾಸಾಹೇಬ ಎಂಬ ನಾಮಕರಣ ಮಾಡಲಾಯಿತು. ಬಾಬಾಸಾಹೇಬ ಅಂದರೆ ಬಿ.ಎ. ಸರನಾಡಗೌಡರ ಅವರು ಸತತ ಹದಿನೈದು ವರ್ಷಕ್ಕಿಂತ ಹೆಚ್ಚಿನ ಅವಧಿಯವರೆಗೆ ಬಾಗಲಕೋಟೆಯ ನಗರಸಭೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು, ಬಾಗಲಕೋಟೆಯ ವಾಸುದೇವ ವಿನೋದಿನಿ ನಾಟ್ಯ ಸಂಘಕ್ಕೆ, ರೋಟರಿ ಕ್ಲಬ್‌ದ ಅಧ್ಯಕ್ಷರಾಗಿಯೂ, ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. (ಆರ್. ಗೋಪಾಲ (ಸಂ.), ಬಾಗಲಕೋಟೆ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಕೆಂಗಲಗುತ್ತಿ ಎಸ್.ಡಿ. ಲೇಖನ, ಹೊನ್ನಾಳದ ದೇಸಗತಿ ಮನೆತನ, ಪು. ೫೯೯–೬೦೩).

ಈ ಮನೆತನದ ಯುವಕ, ಕಾನೂನು ಪದವಿಧರ ಮೂರನೆಯ ಅಪ್ಪಾಸಾಹೇಬರಿಗೆ ಹುನಗುಂದ ತಾಲೂಕಿನ ಕರಡಿ ಗ್ರಾಮದ ಶ್ರೀಮಂತ ಲಿಂಗರಾಜ ಸರನಾಡಗೌಡರ ಮಗಳಾದ ಸುಮಿತ್ತಾದೇವಿಯವರೊಂದಿಗೆ ವಿವಾಹ ಏರ್ಪಡಿಸಲಾಯಿತು. ಅವರ ವೈವಾಹಿಕ ಜೀವನದ ಫಲವಾಗಿ ಉರ್ಮಿಳಾ, ಉತ್ಕಲಾ, ಉಷಾ, ಉಜ್ವಲಾ ಎಂಬ ನಾಲ್ಕು ಜನ ಹೆಣ್ಣುಮಕ್ಕಳು ಮತ್ತು ಬಸವಪ್ರಭು ಎಂಬ ಓರ್ವ ಗಂಡು ಮಗು ಜನ್ಮತಾಳಿದರು. ಕಿ.ಶ. ೧೯೮೩ ಜನೇವರಿ ೨೩ರಂದು ಅಪ್ಪಾಸಾಹೇಬರು ಮರಣಹೊಂದಲಾಗಿ ಮಗನ ಸಾವಿನ ಚಿಂತೆಯಿಂದ ಹಾಸಿಗೆ ಹಿಡಿದ ಬಿ.ಎ.

 ISBN: 978-93-5391-210-9

ಸನಾತಗೌಡರು ಕೆಲವೇ ದಿನಗಳಲ್ಲಿ ಮೃತರಾದರು. ಈ ಮನೆತನದ ಹಿರಿಯ ತಲೆ ಗಂಗಮ್ಮ ಬಾಗಲಕೋಟೆಯ ತಾಣದಲ್ಲಿ ಬಸವಪ್ರಭು ಜೊತೆಯಲ್ಲಿ ಇದ್ದು ೨೨ನೆಯ ಮೇ ೨೦೧೧ರಲ್ಲಿ ಕೈಲಾಸವಾಸಿಯಾದರು.

**೫.೫. ಹಾಲಿಗೇರಿ (ಯಂಡಿಗೇರಿ ನೀರಬೂದಿಹಾಳ) ದೇಸಗತಿ**

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನಲ್ಲಿರುವ ಚಿಕ್ಕ ಗ್ರಾಮ ಹಾಲಿಗೇರಿಯು ದೇಸಗತಿ ಮನೆತನದ ಸ್ಥಳದಲ್ಲಿ ಮತ್ತೊಂದು ಕೇಂದ್ರ. ವಿಜಯಪುರದ ಆದಿಲ್‌ಷಾಹಿಗಳಿಂದ ೧೨೦ ಗ್ರಾಮಗಳ ಇನಾಮ್ ಪಡೆದುಕೊಂಡು ಬಸವಪ್ರಭು ಎಂಬವನು ದೇಸಗತಿ ಆಳ್ವಿಕೆಯನ್ನು ಪ್ರಾರಂಭಿಸಿದನು. ಬ್ರಿಟಿಷರ ಕಾಲಾವಧಿಯಲ್ಲಿಯೂ ಇವರ ಆಳ್ವಿಕೆಯು ಮುಂದುವರೆಯಿತು. ಮೈಸೂರಿನ ದಳವಾಯಿ ಹೈದರಲಿಯಿಂದ ಜಾಲಿಹಾಳ, ಬಾದಾಮಿ, ಕೆರೂರ ಪರಗಣಗಳ ಅಧಿಕಾರವನ್ನು ಪಡೆದುಕೊಂಡರು. ಬ್ರಿಟಿಷ್‌ರಿಂದ ಲ್ಯಾಂಡ್ ಲಾರ್ಡ, ಬಹದ್ದೂರ, ರಾವ್‌ಬಹದ್ದೂರ ಎಂಬ ಬಿರುದುಗಳನ್ನು ಈ ಮನೆತನದವರು ಪಡೆದುಕೊಂಡಿದ್ದರು. ಹಾಲಿಗೇರಿಯಿಂದ ಯಂಡಿಗೇರಿ ನೀರಬೂದಿಹಾಳಕ್ಕೆ ದೇಸಾಯಿಯವರು ಬಂದು ನೆಲೆಸಿದರು. ಇನಾಂ ಆಯೋಗದ ದಾಖಲೆಯ ಪ್ರಕಾರ ಇವರ ಅಧಿಕಾರವು ಈ ಕೆಳಗಿನಂತೆ ದಾಖಲಾಗಿದೆ. ಕೆರೂರ ಪರಗಣೆ ಮತ್ತು ಅನವಾಲ ಪರಗಣೆ : ಪವಾಡೆಪ್ಪ ಬಸಪ್ಪ ವಡೇರ (ದೇಶಮುಖ) ಇವರಿಗೆ. ಬೀಳಗಿ ಪರಗಣೆ : ಹುಚ್ಚಪ್ಪ ಕೊಚ್ಚಪ್ಪ ವಡೇರ (ದೇಶಮುಖ) ಇವರಿಗೆ, ಕಲಾದಗಿ ಪರಗಣೆಯನ್ನು ಮುಂದೆ ಬಂದವರಿಗೆ ಕೊಡಲು ಸೂಚಿಸಲಾಗಿದೆ ಎಂಬ ದಾಖಲೆಗಳಿದ್ದವು.

**೫.೬. ಕುಳಲಿ ದೇಸಗತಿ**

ಮುಧೋಳ ತಾಲೂಕಿನ ಕುಳಲಿ ಗ್ರಾಮದಲ್ಲಿಯೂ ಆದಿಲ್‌ಷಾಹಿಗಳಿಂದ ಇನಾಮ್ ಪಡೆದುಕೊಂಡ ದೇಸಗತಿ ಮನೆತನವಿತ್ತು. ಈ ಮನೆತನದ ಬಾಲಪ್ಪ ಎಂಬಾತನು ಆದಿಲ್‌ಷಾಹಿಗಳಿಂದ ಮದಿಸಿದ ಆನೆಯನ್ನು ಸೋಲಿಸಲು ಇಳೆ ಹಿಡಿದುಕೊಂಡು ಅದರಲ್ಲಿ ವಿಜಯಶಾಲಿಯಾದನು. ಈತನ ಪರಾಕ್ರಮವನ್ನು ಮೆಚ್ಚಿ ಆದಿಲ್‌ಷಾಹಿಯು ಬಾಲಪ್ಪನಿಗೆ 'ಆನೆಖಾನ' ಎಂಬ ಬಿರುದನ್ನು ನೀಡಿ ಗೌರವಿಸಿದನು. ಅಲ್ಲದೇ ಕುಳಲಿ, ಮಳಲಿ, ಬುದ್ನಿ, ಶಿರೋಳ, ಮುಗಳಖೋಡ, ಧವಳೇಶ್ವರ, ಮುಧೋಳ, ಅಕ್ಕಿಮರಡಿ, ಸಂಗಾನಟ್ಟಿ, ಬಿಸನಾಳ, ಕೆಸರಕೊಪ್ಪ, ಸೋರಗಾವಿ, ನಂದಗಾವಿ, ಮಲ್ಲಾಪುರ, ಮಂಜರಕೊಪ್ಪ, ಮುದಕವಿ ಪರಗಣೆಯಲ್ಲಿರುವ ಬಟಕುರ್ಕಿ, ಕಲ್ಹಡ, ಹಣಮಾಪುರ, ತಿಮ್ಮಾಪುರ, ಕಲ್ಲಾಪುರ (ಎಂ) ಚಿಕ್ಕತಡಸಿ, ಆನೆಗುದ್ದಿ, ನಾಗನೂರ, ರಾಜನಾಳ, ಚನ್ನಾಪುರ, ನಂದ್ಯಾಳ, ಉಮತಾರ, ಮುದಕವಿ, ಖಾನಾಪುರ (ಎಂ) ಮುಂತಾದ ೧೫ಕ್ಕೂ ಅಧಿಕ ಗ್ರಾಮಗಳ ಅಧಿಕಾರವನ್ನು ಪಡೆದುಕೊಂಡು ಆಳ್ವಿಕೆ ನಡೆಸಿದರು.

**೫.೭. ತೇರದಾಳ ದೇಸಗತಿ**

ವಿಜಯಪುರದ ಅಲಿ ಆದಿಲ್‌ಷಾಹಿಯ ಕಾಲದಲ್ಲಿ ನಾಡಗೌಡಕಿಯನ್ನು ಪಡೆದ ಕೃಷ್ಣಪ್ಪ ಎಂಬವರ ಮೂಲಕ ತೇರದಾಳದ ದೇಸಾಯಿ ಮನೆತನದ ಆಳ್ವಿಕೆಗೆ ಬುನಾದಿ ಹಾಕಿದರು. ಶಾಸನದ ಪ್ರಕಾರ ತೇರದಾಳ, ಹನಗಂಡಿ, ಹಳಿಂಗಳಿ ದೇಸಗತಿಗಳ ಮೂಲ ಒಂದೇ ಆಗಿತ್ತು. ಆದರೆ ಸಂಪತ್ತಿನ ಕಲಹದಿಂದ ಸಹೋದರರು ಬೇರೆ ಬೇರೆಯಾದರು. ಇದರಿಂದ ಒಂದಿದ್ದ ದೇಸಗತಿ ಮೂರು ಮನೆತನಗಳಾಗಿ ಕವಲೊಡೆದವು. ತೇರದಾಳದ ದೇಸಗತಿ ಅಧೀನದಲ್ಲಿ ೩೩ ಗ್ರಾಮಗಳಿದ್ದವು. ಅವುಗಳಲ್ಲಿ ಮುಗಳಕೋಡ, ಹನಗಂಡಿ, ತಮದಡ್ಡಿ, ಹಳಿಂಗಳಿ, ಮದನಮಟ್ಟಿ, ತೇರದಾಳ, ಇಂಗಳಗಾವಿ, ಹಳ್ಳೂರ, ಬೀಮಲಾಪುರ, ಸೇಗುಣಸಿ, ಕವಡಿಕೊಪ್ಪ, ಯರಗಟ್ಟಿ, ಹಿಡಕಲ್, ಮುಡಶಿನಾಳ, ಗುಂಡವಾಡ, ವರೂರ, ಸಿರೂರ, ಹಾರೋಗೇರಿ, ಗೋಲಭಾವಿ, ಸುಲ್ತಾನಪುರ, ಕಾಲತಿಪ್ಪಿ, ಇಟಗಿಹಾಳ, ಮೂಡಲಗಿ, ಕೋಳಿಗುಡ್ಡ, ಮದಲಮಟ್ಟಿ, ಹಂದಿಗುಂದ, ಯಲುರಟ್ಟಿ, ಇಂಗಳಗಿ, ಬಡಬ್ಯಾಕೋಡ, ರಬಕವಿ, ಗುರ್ಲಾಪೂರ, ಬಡವಾಳ ಪ್ರಮುಖವಾದವುಗಳಾಗಿವೆ. (ಅದೇ).

**೫.೮. ಐಹೊಳೆ ದೇಸಗತಿ**

ವಿಜಯಪುರದ ಆದಿಲ್‌ಷಾಹಿಗಳ ಆಳ್ವಿಕೆಯ ಕಾಲದಲ್ಲಿ ಪ್ರಾಬಲ್ಯವನ್ನು ತೋರ್ಪಡಿಸಿದ ಬೈರಹಕ್ಕಿಯು ಬೆಳದಿಂಗಳ ಸಮಯದಲ್ಲಿ ಕುದುರೆಯ ಕಣ್ಣುಗಳನ್ನು ಕುಕ್ಕಿತಿನ್ನುತ್ತಿತ್ತು. ಈ ಭೈರಹಕ್ಕಿಯನ್ನು ಹಿಡಿದು ಕೊಂದವರಿಗೆ ಇನಾಂ ಕೊಡಲಾಗುವುದು ಎಂದು ಆದಿಲ್‌ಷಾಹಿಗಳು ಆದೇಶವನ್ನು ಮಾಡಿದರು. ಆ ಪ್ರಕಾರ ಬೈರಹಕ್ಕಿಯನ್ನು ಹೊಡೆದು ಕೊಂದು ಹಾಕಿದ್ದರಿಂದ ಐಹೊಳೆ ಓರ್ವ ಯುವಕನಿಗೆ ಭೈರಹಕ್ಕಿ ಬಹದ್ದೂರ ಎಂಬ ಬಿರುದನ್ನು ನೀಡಿದರಲ್ಲದೆ ೩೩೦ ಗ್ರಾಮಗಳ ಇನಾಂನ್ನು ನೀಡಿದರು. ಅಂದಿನಿಂದ ಐಹೊಳೆಯ ದೇಸಗತಿ ಮನೆತನದ ಆಳ್ವಿಕೆ ಆರಂಭವಾಯಿತು. ಆದರೆ ಆದಿಲ್‌ಷಾಹಿಯು ಕೊಡಮಾಡಿದ ಪರಮಾನ್ನಿನಲ್ಲಿ ಎಂಟು ಗ್ರಾಮಗಳ ಉಲ್ಲೇಖ ಮಾತ್ರ ಕಾಣಸಿಗುವುದು. ಅವುಗಳೆಂದರೆ; ಹುನ್ನಳ್ಳಿ, ನಿಂಬಲಗುಂದಿ, ಮುಳ್ಳೂರು, ಕಳಗುಡ್ಡ, ಐಹೊಳೆ, ಕುಣಿಬೆಂಚಿ, ಕ್ಯಾದಗೇರಿ, ಜೀಲಾಪುರ (ಕಲ್ಯಾಣಿ ಸಂಗಮೇಶ, ಬಾಗಲಕೋಟೆ ಜಿಲ್ಲೆಯ ದೇಸಗತಿಗಳು).

 ISBN: 978-93-5391-210-9

**೩.೯. ಶಿರಗುಪ್ಪಿ ದೇಸಗತಿ**

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನಲ್ಲಿರುವ ಶಿರಗುಪ್ಪಿ ಎಂಬ ಚಿಕ್ಕ ಗ್ರಾಮವು ಆದಿಲ್‌ಷಾಹಿಗಳ ಕಾಲದ ದೇಸಗತಿ ಮನೆತನದ ಕೇಂದ್ರವಾಗಿತ್ತು. ೨ನೆಯ ಮಹಮ್ಮದ ಆದಿಲ್‌ಷಾಹಿಯ ಕಾಲದಲ್ಲಿ ಕ್ಷತ್ರಿಯ ವೀರಪ್ಪನಾಯಕನ ಶೌರ್ಯವನ್ನು ಮೆಚ್ಚಿದ ಆದಿಲ್‌ಷಾಹಿಯು ನಾಯಕನಿಗೆ ಇನಾಂ ಕೊಟ್ಟು ದೇಸಗತಿಯ ಜವಾಬ್ದಾರಿಯನ್ನು ನೀಡಿದರು. ಅಂದಿನಿಂದ ಸಿರಗುಪ್ಪಿ ದೇಸಗತಿ ಮನೆತನದ ಅಧಿಕಾರ ಆರಂಭವಾಯಿತು.

**೩.೧೦. ಕಂದಗಲ್ ದೇಸಗತಿ**

ಹುನಗುಂದ ತಾಲೂಕಿನ ಐತಿಹಾಸಿಕ ಗ್ರಾಮ ಕಂದಗಲ್. ಈ ಗ್ರಾಮವು ಹೈದ್ರಾಬಾದ ನಿಜಾಂನ ಆಳ್ವಿಕೆಗೆ ಒಳಪಟ್ಟಿದ್ದು. ಆರಂಭದಲ್ಲಿ ಲಿಂಗಸ್ಗೂರು ತಾಲೂಕಿನಿಂದ ಹುನಗುಂದದ ತಾಲೂಕಿನ ನಿಯಂತ್ರಣಕ್ಕೆ ಬಂದಿತು. ಇಲ್ಲಿರುವ ದೇಸಗತಿ ಮನೆತನದವರನ್ನು ಇಂದಿಗೂ ಲಿಂಗಸ್ಗೂರು ದೇಸಾಯಿಯವರೆಂದೇ ಕರೆಯುತ್ತಾರೆ. ಇವರು ವಿಜಯಪುರದ ಆದಿಲ್‌ಷಾಹಿಗಳಿಂದ ದೇಸಗತಿ ಅಧಿಕಾರವನ್ನು ಪಡೆದುಕೊಂಡರು. ಇವರ ನಿಯಂತ್ರಣದಲ್ಲಿ ಕಂದಗಲ್, ಗೋನಾಳ, ಸೋಮಲಾಪುರ, ಮೇಂಟಗೇರಿ ಹಾಗೂ ಕೃಷ್ಣಾಪುರ ಎಂಬ ಐದು ಗ್ರಾಮಗಳು ಸೇರಿದ್ದವು.

**೩.೧೧. ಕೋಟೆಕಲ್ ದೇಸಗತಿ**

ಬಾದಾಮಿ ತಾಲೂಕಿನ ಗುಳೇದಗುಡ್ಡಕ್ಕೆ ಹೊಂದಿಕೊಂಡಿರುವ ಗ್ರಾಮ ಕೋಟೆಕಲ್. ಮೂಲತಃ ಮುದ್ದೇಬಿಹಾಳ ತಾಲೂಕಿನ ವಡವಡಗಿ ಹೆಣ್ಣಾಸ್ತಿಗೆ ಕೋಟೆಕಲ್ಲಿಗೆ ಬಂದು ನೆಲೆಸಿದ ಇವರು ಆದಿಲ್‌ಷಾಹಿಗಳಿಂದ ಕೋಟೆಕಲ್, ಕಸಬಾ ಪರ್ವತಿ, ಖಾನಾಪುರ, ಮೌಜೆ ಹರದೊಳ್ಳಿ, ಮುರಡಿ, ಹಾನಾಪುರ, ತೋಗುಣಸಿ, ಲಾಯದಗುಂದಿ, ಕೊಟ್ನಳ್ಳಿ, ಆಸಂಗಿ, ಆಲೂರ, ಪರಕಡ್ಡಿ, ಇಂಜಿನವಾರಿ, ಬೂದಿನಗಡ, ತಿಮ್ಮಸಾಗರ, ಹುಲ್ಲಿಕೇರಿ ಗ್ರಾಮಗಳ ಇನಾಂ ಪಡೆದುಕೊಂಡು ಗೋಸಲ ಭೈರಿದೇಸಮುಖನು ಆಳ್ವಿಕೆ ಆರಂಭಿಸಿದನು.

**೩.೧೨. ಗಿರಿಸಾಗರ ದೇಸಗತಿ**

ಬೀಳಗಿ ತಾಲೂಕಿನಲ್ಲಿರುವ ಗಿರಿಸಾಗರ ಗ್ರಾಮದವರು ಆನೆಗುಂದಿಯ ನರಪತಿಯಿಂದ ಉಂಬಲಿಯನ್ನು ಪಡೆದುಕೊಂಡು ಈ ಭಾಗದಲ್ಲಿ ದೇಸಗತಿ ಆರಂಭಿಸಿದರು. ಅಲ್ಲದೇ ಇವರು ಆದಿಲ್‌ಷಾಹಿಗಳಿಂದಲೂ ೧೭ ಹಳ್ಳಿಗಳ ಇನಾಮ್ ಪಡೆದುಕೊಂಡಿದ್ದರು. ಅವುಗಳೆಂದರೆ; ಮಟ್ಟಾಳೆ, ಹಣಮಾಪುರ, ಸಿದ್ಧನಾಥ, ಹಳೇಕೊಳ್ಳಿ, ಸುಳಕೂಡ, ತೆಲಗಿ, ಜೀರಲದಿನ್ನಿ, ತಡಲಗಿ, ಬಾಣಾನಗರ, ಬಳೂಲೆ, ಚಿಕ್ಕಆಸಂಗಿ, ಹಿರೇಆಸಂಗಿ, ಕುರಬರದಿನ್ನಿ ಹಾಗೂ ಬೀರಕಬ್ಬಿ, ಬಾಣಾನಗರ ಹಾಗೂ ಗಿರಿಸಾಗರ ಪ್ರಮುಖವಾದವುಗಳಾಗಿವೆ.

**೩.೧೩. ಲೋಕಾಪುರ ದೇಸಗತಿ**

ಲೋಕಾಪುರ ದೇಸಗತಿ ಮನೆತನವು ಕ್ಷತ್ರಿಯ ಮನೆತನವಾಗಿದ್ದು, ಆನೆಗುಂದಿ ಸಂಸ್ಥಾನದವರಿಂದ ಈ ಭಾಗವನ್ನು ಸರ್ವಮಾನ್ಯ ಇನಾಂ ಆಗಿ ಪಡೆದುಕೊಂಡು ಮುಂದೆ ಆದಿಲ್‌ಷಾಹಿಗಳು ಮುಧೋಳನ್ನು ಘೋರ್ಪಡೆ ಮನೆತನದವರಿಗೆ ಜಾಗಿರಾಗಿ ಕೊಟ್ಟಿದ್ದರಿಂದ ಈ ದೇಸಗತಿಯೂ ಕೂಡಾ ಘೋರ್ಪಡೆಗಳ ನಿಯಂತ್ರಣಕ್ಕೆ ಬಂದರು. ಈ ದೇಸಗತಿಯ ಅಧೀನದಲ್ಲಿ ಯರಗಟ್ಟಿ, ಸಿಂಧಿಕುರುಬೆಟ್ಟ, ಕೌಜಲಗಿ ಮುಂತಾದ ಗ್ರಾಮಗಳು ಸೇರ್ಪಡೆಯಾಗಿದ್ದವು.

**೩.೧೪. ಪಟ್ಟದಕಲ್ಲು ದೇಸಗತಿ**

ಐಹೊಳೆ, ಪಟ್ಟದಕಲ್ಲು ಹಾಗೂ ನೀರಬೂದಿಹಾಳ ದೇಸಗತಿಗಳ ಮೂಲ ಒಂದೇ ಆಗಿತ್ತು. ಆದರೆ ಸಹೋದರರ ಕಲಹದಿಂದ ದೇಸಗತಿಗಳು ಒಡೆದವು. ಆದಿಲ್‌ಷಾಹಿಗಳು ಪಟ್ಟದಕಲ್ಲು ದೇಸಗತಿ ಮನೆತನಕ್ಕೆ ಪಟ್ಟದಕಲ್ಲು, ಅಕ್ಕರಗಲ್ಲ, ಸಿದ್ಧನಕೊಳ್ಳ, ಉಪನಾಳ, ನಾಗರಾಳ, ಮಂಗಳಗುಡ್ಡ ಗ್ರಾಮಗಳ ಜವಾಬ್ದಾರಿಯನ್ನು ನೀಡಿದ್ದರು ಎಂಬುದು ದಾಖಲೆಗಳಿಂದ ತಿಳಿದುಬರುತ್ತದೆ.

**೩.೧೫. ಕೆರಕಲಮಟ್ಟಿ ದೇಸಗತಿ**

ಕೆರೂರು ಪರಗಣಕ್ಕೆ ಸೇರಿದ ಇವರನ್ನು ಪರಗಣ ವತನದಾರರೆಂದೇ ಕರೆಯುವರು. ಪರಗಣ ಕೆರೂರ ಹುಲ್ಲೂರದಲ್ಲಿರುವ ಕೆರಕಲಮಟ್ಟಿ, ಜಲಗೇರಿ, ಹೂಲಗೇರಿ, ಚಿಂಚಲಕಟ್ಟಿ, ಹೊಸೂರು, ತಿಮ್ಮಾಪುರ, ಇನಾಂ ಯರಗೊಪ್ಪ ಈ ಕೆರಕಲಮಟ್ಟಿ ದೇಸಾಯಿಗಳ ನಿಯಂತ್ರಣದಲ್ಲಿದ್ದವು.

**೩.೧೬. ಕೆಲೂರು ದೇಸಗತಿ**

ಕೆಲೂರು, ಬೂದಿಹಾಳ, ಇದ್ದಲಗಿ ಹಾಗೂ ಚಿತ್ತವಾಡಗಿ ಈ ನಾಲ್ಕು ದೇಸಗತಿಗಳ ಮೂಲ ಕೆಲೂರು ವಿಜಯಪುರದ ಆದಿಲ್‌ಷಾಹಿಗಳು ಕೆಲೂರಿಗೆ ಸಂಗನಬಸಪ್ಪ, ಬೂದಿಹಾಳಕ್ಕೆ ಮಲ್ಲಪ್ಪ, ಇದ್ದಲಗಿ ಗ್ರಾಮಕ್ಕೆ ನಿಂಗಪ್ಪ

ಹಾಗೂ ಚಿತ್ತವಾಡಗಿ ಗ್ರಾಮದ ಜವಾಬ್ದಾರಿಯನ್ನು ಪರೂತಪ್ಪನಿಗೆ ನೀಡಿ ದೇಸಗತಿ ಅಧಿಕಾರವನ್ನು ನಿರ್ವಹಿಸಿಕೊಂಡು ಹೋಗುವಂತೆ ಆದೇಶಿಸಿದರು.

**೫.೧೭. ಗಲಗಲಿ-ಯಡಹಳ್ಳಿ ದೇಸಗತಿ**

ಗಲಗಲಿ-ಯಡಹಳ್ಳಿ ದೇಸಗತಿಯೂ ಆದಿಲ್‌ಷಾಹಿಗಳಿಂದ ಪಡೆದುಕೊಂಡ ಅಧಿಕಾರವಾಗಿದೆ. ಈ ದೇಸಾಯಿ ಮನೆತನದ ಕೈಪಿಯತ್ತಿನ ಪ್ರಕಾರ ಈ ದೇಸಗತಿ ಮನೆತನದ ಆಶ್ರಯದಲ್ಲಿ ೧೭ ಗ್ರಾಮಗಳು ಕಾರ್ಯನಿರ್ವಹಿಸುತ್ತಿದ್ದವು. ಅವುಗಳೆಂದರೆ; ಗಲಗಲಿ, ಅಂಬಲಝುರಿ, ಕೋಲೂರು, ಯಡಹಳ್ಳಿ, ರಬಕವಿ, ಗಣಿ, ಚಿಕ್ಕಹಂಚಿನಾಳ, ಹಿರೇಹಂಚಿನಾಳ, ಬುದ್ನಿ, ಬೂದಿಹಾಳ, ಚೌಡಾಪುರ, ಬಳವಲಮಟ್ಟಿ, ಗುಳಬಾಳ, ಬಿಸನಾಳ, ಮಂಡನೂರ, ಬಬಲಾದಿ ಹಾಗೂ ಪಾಶ್ವಾಪುರ ಇತ್ಯಾದಿ.

**೫.೧೮. ಕೊಣ್ಣೂರು ದೇಸಗತಿ**

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನಲ್ಲಿರುವ ಕೊಣ್ಣೂರು ಮೂಲತಃ ಜಮಖಂಡಿಯ ಪಟವರ್ಧನ ಆಳ್ವಿಕೆಗೊಳಪಟ್ಟಿದ್ದು ಕ್ರಿ.ಶ. ೧೭೩೭ ರಲ್ಲಿ ಪ್ರತ್ಯೇಕ ದೇಸಗತಿ ನಾಡಾಗಿ ಉದಯಗೊಂಡಿತು. ಆದುದರಿಂದ ಇಲ್ಲಿಯ ದೇಸಗತಿಯನ್ನು ಕೊಣ್ಣೂರು ದೇಸಾಯಿಗಳೆಂದೇ ಕರೆಯುವ ವಾಡಿಕೆ ಮುಂದುವರೆಯಿತು. ಈ ದೇಸಗತಿಯ ಅಡಿಯಲ್ಲಿ ಬರಗಿ, ಅಂತಾಪುರ, ಚಿಚಖಂಡಿ, ನಿಂಗಾಪುರ, ಹಲಕಿ, ಚಾಲಿಬೇರ, ಪೆಟ್ಲೂರ, ಮೆಟಗುಡ್ಡ, ಜಂಬಗಿ, ಯಡಹಳ್ಳಿ ಗ್ರಾಮಗಳಿದ್ದವು. (ಅದೇ, ಹುನಗುಂದದ ನಾಗರಾಳ ಮನೆತನ). ಹುನಗುಂದದ ನಾಗರಾಳ ಮನೆತನದವರು ಮೂಲತಃ ಮಹಾರಾಷ್ಟ್ರದ ಜತ್ ಮತ್ತು ಅಕ್ಕಲಕೋಟೆ ತಾಲೂಕಿನ ಸಗರಿ-ಕೆಂಬಾವಿ ಊರಿನವರಾಗಿದ್ದು, ಈ ಮನೆತನದ ಮೂಲಪುರುಷನಾದ ಬಸನಗೌಡರು ಗೋಧಿಬನ್ನೂರು, ಬನಾ, ನಿಂಬರಗಿ ಮುಂತಾದ ಗ್ರಾಮಗಳ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ದೇಸಾಯಿ ಮನೆತನದವರಾಗಿದ್ದಾರೆ. ಕ್ರಮೇಣ ದೇಹಲಿಯ ಬಾದಷಹನ ದಬ್ಬಾಳಿಕೆಯಿಂದ ಅಧಿಕಾರವನ್ನು ತ್ಯಜಿಸಿ ಹುನಗುಂದದ ಸೊಪ್ಪಿಮಠ ಬಿಕ್ಷಯ್ಯ ಎಂಬವರ ಸಲಹೆಯಂತೆ ಕಲಬಳ್ಳಿ-ನಾಗರಾಳ ಗ್ರಾಮಕ್ಕೆ ಬಂದು ನೆಲೆಸಿದರು ಅಂದಿನಿಂದ ದೇಸಾಯಿ ಹೆಸರು ಮಾಯವಾಗಿ ನಾಗರಾಳ ಮನೆತನದವರೆಂದು ಕರೆಯಲಾಯಿತು. (ಮಾಗಿ ಬಿ.ಎಂ., ದೊಡ್ಡಪ್ಪನವರು ನಾಗರಾಳ, ಪು. ೪೩). ಈ ಮನೆತನದ ದೊಡ್ಡಪ್ಪನವರ ಕಾರ್ಯವೈಖರಿಯನ್ನು ಮನಗಂಡ ಕಾಶಿ ಮಹಾರಾಜರು ತಮ್ಮ ಮಗಳಾದ ರಾಜಮ್ಮದೇವಿಯನ್ನು ಕೊಟ್ಟು ಮದುವೆ ಮಾಡಿದರು.

**೫.೧೯. ಮರೋಳದ ದೇಸಮುಖರು**

ಹುನಗುಂದದ ನಾಗರಾಳ ಮನೆತನದ ಸಂಬಂಧಿಕರಾದ ಮರೋಳದ ದೇಶಮುಖರು ಮೂಲತಃ ಗೊರಬಾಳ ಗ್ರಾಮದವರು. ಈ ಮನೆತನದ ಮಲ್ಲಪ್ಪ ಎಂಬವನು ಹೈದ್ರಾಬಾದಿನ ನಿಜಾಮನ ಆಳ್ವಿಕೆಯ ಅವಧಿಯಲ್ಲಿ ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಕಾಕಲಮರ ಗ್ರಾಮಕ್ಕೆ ಹೋಗಿ ಜನಸೇವೆ ಮಾಡುತ್ತಿರುವಾಗ ನಿಜಾಮನು ಈತನ ಸೇವಾ ಕಾರ್ಯಗಳನ್ನು ಮೆಚ್ಚಿ ೮೪ ಗ್ರಾಮಗಳ ದೇಸಗತಿ ಜವಾಬ್ದಾರಿಯನ್ನು ವಹಿಸಿದನು. ಅಲ್ಲದೇ ನಿಜಾಮನಿಂದ 'ಭೂಪಾಲ' ಎಂಬ ಬಿರುದನ್ನು ಧರಿಸಿದನು. ಅಂದಿನಿಂದ ಮಲ್ಲಪ್ಪನು ಮಲ್ಲಭೂಪಾಲ ಎಂದು ಕರೆಯಲ್ಪಟ್ಟನು. ಈತನಿಗೆ ಭೀಮರಾಯ, ಬಸಪ್ಪ, ಸಂಗಪ್ಪ, ಮಾಲಿಂಗಪ್ಪ ಎಂಬ ನಾಲ್ಕು ಜನ ಸಹೋದರರಿದ್ದರು. ಅಲ್ಲದೇ ದೇಶಮುಖರ ಅಧಿಕಾರ ಕ್ರಮೇಣ ಕಡಿಮೆಯಾದಾಗ ಮಲ್ಲಭೂಪಾಲನ ಮಗ ಶಿವಶರಣ ಭೂಪಾಲ ಮತ್ತು ಮಡದಿ ನಿಂಗಮ್ಮ /ಬಡೆಮ್ಮನೊಂದಿಗೆ ಕಾಕಲವಾರದಿಂದ ಮರೋಳಕ್ಕೆ ಬಂದು ನೆಲೆಸಿದರು. ಹುನಗುಂದದ ಹನಮಂತಾಚಾರ್ಯ ಜೋಶಿಯವರನ್ನು ತಮ್ಮ ಮನೆತನದ ಪುರೋಹಿರನ್ನಾಗಿಸಿಕೊಂಡರು. ಈ ಆಚಾರ್ಯರೂ ಮೂಲತಃ ರಾಯಚೂರು ಜಿಲ್ಲೆಯ ಲಿಂಗಸ್ಗೂರು ತಾಲೂಕಿನ ಸಂತೆಕೆಲ್ಲೂರಿನ ರಾಜಪುರೋಹಿತರ ಮಗ ಹಾಗೂ ವೆಂಕಟೇಶ್ವರ ದೇವಾಲಯದ ಅರ್ಚಕರಾಗಿದ್ದರು. ಇವರು ದೇಸಮುಖರ ಪುರೋಹಿತರಾಗಿ ಸೇವೆ ಸಲ್ಲಿಸುತ್ತಿದ್ದರು.

**೫.೨೦. ಅಮರಾವತಿ ದೇಸಗತಿ ಮನೆತನ**

ಹುನಗುಂದ ತಾಲೂಕಿನ ಅಮರಾವತಿಯ ದೇಸಾಯಿಗಳು ರಡ್ಡಿ ವರ್ಗಕ್ಕೆ ಸೇರಿದವರು. ರಕ್ಕಸಗಿ, ಹುಲಿಗಿನಾಳ, ಬಿಂಜವಾಡಗಿ, ಹಿರೇಕೊಡಗಲಿ ಮುಂತಾದ ೧೭ ಗ್ರಾಮಗಳ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಈ ಮನೆತನದ ರಾಮಪ್ಪ ದೇಸಾಯಿಯವರು ದಕ್ಷ ಮತ್ತು ಪ್ರಗತಿಪರ ಆಡಳಿತಗಾರರಾಗಿದ್ದರು. ಆಡಳಿತದಲ್ಲಿ ದಕ್ಷ ಆಡಳಿತಾಧಿಕಾರಿಗಳನ್ನು ನೇಮಿಸುತ್ತಿದ್ದರು. ಉದಾ; ಒಂದು ಸಲ ಪಂಡರಪುರಕ್ಕೆ ಕುದುರೆಗಳನ್ನು ಖರೀದಿಸಿಕೊಂಡು ಬರುವಾಗ ಅಕ್ಕಲಕೋಟೆಯಲ್ಲಿ ತಂಗಿದ್ದರು. ಅಲ್ಲಿ ಬಿದರಕೋಟೆಯ ನಾಡಗೌಡರಾಗಿ ಸೇವೆ ಸಲ್ಲಿಸುತ್ತಿದ್ದ ಸಂಗಪ್ಪನವರು ಆ ಭಾಗದ ದಕ್ಷ ಆಡಳಿತಗಾರರಾಗಿದ್ದರು. ಅವರನ್ನು ತಮ್ಮ ಬಳಿಗೆ ಕರೆಯಿಸಿಕೊಂಡು ಅವರ ಮನಸ್ಸನ್ನು

 ISBN: 978-93-5391-210-9

ಒಲಿಸಿಕೊಂಡು ಅಮರಾವತಿಗೆ ಕರೆದುಕೊಂಡು ಬಂದು ಅವರಿಗೆ ಹುನಗುಂದದ ಹವಾಲ್ದಾರಿಕೆಯ ಜವಾಬ್ದಾರಿಯನ್ನು ನೀಡಿದರು. ಅಂದಿನಿಂದ ನಾಡಗೌಡ ಸಂಗಪ್ಪನವರು ಹುನಗುಂದದ ಹವಾಲ್ದಾರ ಸಂಗಣ್ಣನವರೆಂದು ಪ್ರಸಿದ್ಧರಾದರು (ಬಸವಂತಪ್ಪ ಹವಾಲ್ದಾರ ಅವರೊಂದಿಗಿನ ಸಂದರ್ಶನದೊಂದಿಗೆ ಪಡೆದ ಮಾಹಿತಿ)

**೫.೨೧ ಹುನಗುಂದದ ಹವಾಲ್ದಾರ ಮನೆತನ**

ಹುನಗುಂದದ ಹವಾಲ್ದಾರ ಮನೆತನದ ಪೂರ್ವಜ ಸಂಗಪ್ಪನವರು ಮೂಲತಃ ಪ್ರಸ್ತುತ ಮಹಾರಾಷ್ಟ್ರ ಅಕ್ಕಲಕೋಟೆ ಜಿಲ್ಲೆಯ ಬದರಿಕೋಟೆಯಲ್ಲಿ ನಾಡಗೌಡರಾಗಿ ಕಾರ್ಯನಿರ್ವಹಿಸುತ್ತಿದ್ದರು. ಅವರ ದಕ್ಷತೆ ಮತ್ತು ಪ್ರಾಮಾಣಿಕತೆ ಅದ ಸಂಗಪ್ಪನವರ ಕಾರ್ಯದ ಕುರಿತು ಪಂಢರಪುರಕ್ಕೆ ಕುದುರೆಗಳನ್ನು ಖರೀದಿಸಲು ಹೋಗಿದ್ದ ಅಮರಾವತಿಯ ದೇಸಾಯಿ ರಾಮಪ್ಪನವರು ಕೇಳಿದ್ದರು. ಮರಳಿ ಬರುವಾಗ ಅಕ್ಕಲಕೋಟೆಯಲ್ಲಿ ಸಂಗಪ್ಪನವರನ್ನು ಭೇಟಿಯಾಗಿ ಅವರನ್ನು ತಮ್ಮೊಂದಿಗೆ ಅಮರಾವತಿಗೆ ಕರೆತಂದು ಅವರಿಗೆ ಹುನಗುಂದದ ಹವಾಲ್ದಾರಿಕೆಯ ಜವಾಬ್ದಾರಿಯನ್ನು ವಹಿಸಿದರು. ಅಂದಿನಿಂದ ನಾಡಗೌಡ ಸಂಗಪ್ಪನವರು ಹವಾಲ್ದಾರ ಸಂಗಪ್ಪನವರಾಗಿ ಕರೆಯಲಾರಂಭಿಸಿದರು.

**೫.೨೨ ದೇಸಗತಿ ಮನೆತನದವರ ಸಾಂಸ್ಕೃತಿಕ ಕೊಡುಗೆಗಳು**

ಬಾಗಲಕೋಟೆಯ ದೇಸಗತಿ ಮನೆತನದವರು ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯೋತ್ತರದ ಅವಧಿಯಲ್ಲಿ ರಾಷ್ಟ್ರಮಟ್ಟದಿಂದ ಮೊದಲ್ಗೊಂಡು ಗ್ರಾಮೀಣ ಮಟ್ಟದ ಸ್ಥಳೀಯ ರಾಜಕೀಯ ರಂಗದಲ್ಲಿದ್ದುಕೊಂಡು ಜನಸೇವೆ ಮಾಡುತ್ತಿರುವುದು ಶ್ಲಾಘನೀಯ ಅಂಶವಾಗಿದೆ. ಕೇವಲ ರಾಜಕೀಯ ರಂಗದಲ್ಲಿ ಮಾತ್ರವಲ್ಲದೇ ಧರ್ಮ, ಶಿಕ್ಷಣ, ಸಾಹಿತ್ಯ ಮತ್ತು ಕಲೆ, ವಾಸ್ತುಶಿಲ್ಪಕಲೆ ಮುಂತಾದ ಕ್ಷೇತ್ರಗಳಿಗೆ ಅಪಾರ ಕೊಡುಗೆಗಳನ್ನು ಸಲ್ಲಿಸುವುದರ ಮೂಲಕ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ

**೬. ಆಡಳಿತ/ರಾಜಕೀಯ ಕೊಡುಗೆಗಳು**

ಪ್ರತಿಯೊಂದು ದೇಸಗತಿ ಮನೆತನದವರು ತಮಗೆ ಬಂದಿರುವ ಪರಗಣದ ಅಭಿವೃದ್ಧಿಗಾಗಿ ಅವಿಶ್ರಾಂತವಾಗಿ ಕಾರ್ಯ ನಿರ್ವಹಿಸುತ್ತಿದ್ದರು. ತಮ್ಮ ಜನರ ರಕ್ಷಣೆ, ಆಂತರಿಕ ಭದ್ರತೆ, ನ್ಯಾಯ ನಿರ್ಣಯ, ಸೇನಾ ಸಂಘಟನೆ, ಕಂದಾಯ ಸಂಗ್ರಹಣೆ ಮುಂತಾದ ಹಲವಾರು ಕಾರ್ಯಗಳನ್ನು ನಿರ್ವಹಿಸುತ್ತ ಪ್ರತಿಗ್ರಾಮದಿಂದ ಜಕಾತಪಟ್ಟಿ, ನೀರಾವರಿ ತೆರಿಗೆ, ಭಂಜರು ಭೂಮಿಯ ತೆರಿಗೆ, ಯುದ್ಧತೆರಿಗೆ, ವಾಣಿಜ್ಯ ತೆರಿಗೆಗಳಿಂದ ಬಂದ ಆದಾಯವೇ ಇವರ ಸಂಭಾವನೆಯಾಗಿತ್ತು. ಆಡಳಿತದಲ್ಲಿ ದೇಸಾಯಿಗಳಿಗೆ ಸಹಾಯಕರಾಗಲು ಮತ್ತು ದೈನಂದಿನ ಕಾರ್ಯಯೋಜನೆಗಳನ್ನು ನಿರ್ವಹಿಸಲು ಶೇಖದಾರ, ಕಾರಕೂನ, ಹವಾಲ್ದಾರ, ದೇಶಕುಲಕರ್ಣಿ, ಪಾಟೀಲ ಮುಂತಾದ ಸ್ಥಳೀಯ ಅಧಿಕಾರಿಗಳ ಸಹಾಯವನ್ನು ಪಡೆಯುತ್ತಿದ್ದರು. ಇವರೂ ಬ್ರಿಟಿಷರಿಂದ ನೇರವಾಗಿ ನಗದು ವೇತನವನ್ನು ಪಡೆಯದೇ ಉಂಬಳಿ ರೂಪದ ವೇತನ ಪಡೆಯುತ್ತಿದ್ದರು. ಇವರಲ್ಲದೇ ಮುಖ್ತ್ಯಾರ, ಆಯಗಾರ, ತಳವಾರ, ಪಟ್ಟೇವಾಲ, ಡೇರೆಯವರು, ಪಾಗನೀಸ, ಶಿಲೆದಾರ, ತೋಫಖಾನ, ಕುದುರೆಸ್ವಾರಿ, ಬಯ್ಯಾರರು ಮುಂತಾದ ಇತರೆ ಅಧಿಕಾರಿಗಳ ನೆರವು ದೊರೆಯುತ್ತಿತ್ತು (ಶೇಖದಾರ್ ಪ್ರಿ.ಎಸ್., ವಿಜಾಪುರ ಜಿಲ್ಲೆಯ ದೇಸಗತಿಗಳು, ೨೦೧೧, ಪು. ೨೩೦)

ನೀರಬೂದಿಹಾಳ ದೇಸಾಯಿ ಮನೆತನದವರು ರಾಜಕೀಯ ರಂಗದಲ್ಲಿ ಪ್ರಭಾವಿಗಳಾಗಿದ್ದ ರಾವ್‌ಸಾಹೇಬ ಉರ್ಫ ವೆಂಕೋಬರಾವ್ ತುಳಸಿಗೇರೆಪ್ಪ ದೇಸಾಯಿ ಬಾದಾಮಿಯ ಹುಲಿ ಎಂದೇ ಪ್ರಸಿದ್ಧಿಯನ್ನು ಪಡೆದುಕೊಂಡಿದ್ದರು. ಇವರು ೧೯೭೨ ಮತ್ತು ೧೯೮೫ರ ಎರಡು ಸಾರ್ವತ್ರಿಕ ಚುನಾವಣೆಗಳಲ್ಲಿ ಬಾದಾಮಿ ಕ್ಷೇತ್ರದಿಂದ ಸ್ಪರ್ಧಿಸಿ ಚುನಾಯಿತರಾಗಿ ಕರ್ನಾಟಕದ ವಿಧಾನಸಭೆಯನ್ನು ಪ್ರವೇಶಿಸಿ ಜನಸೇವೆ ಮಾಡಿದರು. ಬೀಳಗಿ ತಾಲೂಕಿನ ಯಡಹಳ್ಳಿಯ ಮಲ್ಲಪ್ಪ ದೇಸಾಯಿಯವರು ಜನಪರ ಕಾರ್ಯಗಳನ್ನು ಮಾಡುವುದರ ಮೂಲಕ ಬ್ರಿಟಿಷ್ ಸರಕಾರದಿಂದ 'ರಾವ್‌ಸಾಹೇಬ್ ಶ್ರೀಮಂತ' ಎಂಬ ಬಿರುದನ್ನು ನೀಡಿ ಗೌರವಿಸಿದರು (ವಿಜಾಪುರ ಜಿಲ್ಲಾ ಗ್ಯಾಜೆಟಿಯರ್, ಪು. ೭೮೦) ಈ ಮನೆತನದ ರಾಚಪ್ಪ ದೇಸಾಯಿಯು ೧೯೫೭ರಲ್ಲಿ ಕರ್ನಾಟಕ ವಿಧಾನ ಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾಗಿದ್ದ ಇವರು ಪುನಃ ೧೯೭೨ರಲ್ಲಿ ರಾಜ್ಯಸಭಾ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಕ್ರಿ.ಶ. ೧೯೮೪ರಲ್ಲಿ ರಾಜಕೀಯದಿಂದ ನಿವೃತ್ತಿಹೊಂದಿದರು. ಇದೇ ತಾಲೂಕಿನ ಕೊಣ್ಣೂರ ಗಂಗಪ್ಪ ದೇಸಾಯಿಯವರು ೧೯೨೩ರಲ್ಲಿ ಮುಂಬೈ ಸರಕಾರಕ್ಕೆ ತನ್ನನ್ನು ಎರಡನೆಯ ದರ್ಜೆಯ ಸರದಾರನೆಂದು ಗುರುತಿಸಬೇಕು ಎಂದು ಮನವಿ ಪತ್ರವನ್ನು ಬರೆದು ಅದರಲ್ಲಿ ತಮ್ಮ ಮನೆತನದ ನಿರ್ವಹಿಸಿದ, ನಿರ್ವಹಿಸುತ್ತಿರುವ ಜನಪರವಾದ ಕಾರ್ಯಗಳನ್ನು ಕುರಿತು ಮಾಹಿತಿ ನೀಡಿದ್ದರು. ಕೊನೆಗೆ "I beg to remain my lord your

 ISBN: 978-93-5391-210-9

Excellency's most obedience servant" ಎಂಬ ಬರವಣಿಗೆಯೊಂದಿಗೆ ತಮ್ಮ ಅಂಕಿತವನ್ನು ಹಾಕಿದ್ದರು. ಈ ದಾಖಲೆಯನ್ನು ಶರಣಕ ದೇಸಾಯಿಯವರಿಗೆ ಗವರ್ನರ್ ಜನರಲ್ ಕಛೇರಿಯಿಂದ ಪತ್ರಗಳು ಬಂದಿದ್ದವು

To

Shivasiddappa Veerappa Saranak

Land holder Bijapur District

Bomby Presidency

I here by confer upon you the title of Rao Saheb for personal distinction

Viceroy and Governor General of India

New Delli

01.01.1928

Seal

೧೯೩೨ರಲ್ಲಿ ಬ್ರಿಟಿಷ್ ಸರಕಾರ ಇವರಿಗೆ 'ರಾವ್ ಬಹಾದ್ದೂರ' ಎಂಬ ಬಿರುದನ್ನು ನೀಡಿರುವುದರ ಹಿನ್ನೆಲೆಯಲ್ಲಿ ಮತ್ತೊಂದು ಪತ್ರ ದೇಸಾಯಿಯವರಿಗೆ ಬಂದಿತ್ತು

To

Rao Shaib Shivasiddappa Veerappa Saranak

Land holder Bijapur District

Bomby Presidency

I here by confer upon you the title of Rao Bhadur as personal distinction

Viceroy and Governor General of India

New Delli

01.01.1932

Seal

ಹಾಲಿಹಾಳದ ದೇಸಾಯಿ ವೆಂಕಪ್ಪನವರು ರೈತ ಮಿತ್ರರಾಗಿದ್ದು ಜನರಿಗೆ ಅನುಕೂಲವಾಗಲಿ ಎಂದು ಗುಡ್ಡಬೆಟ್ಟಯಲ್ಲಿರುವ ತಮ್ಮ ಜಮೀನಿನಲ್ಲಿಯೇ ಬಾವಿಯೊಂದನ್ನು ನಿರ್ಮಿಸಿದರು. ಇದನ್ನು 'ಎಂಕಾಬಸಿ ಬಾವಿ' ಎಂದು ಇಂದಿಗೂ ಕರೆಯುತ್ತಾರೆ. ಇವರ ಬದಿಯಲ್ಲಿಯೇ ದೇಸಾಯಿಯವರ ಸಮಾಧಿಯೂ ಇದೆ. (ಬಾಗಲಕೋಟ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೨೯೦). ಹುನಗುಂದ ತಾಲೂಕಿನ ಅಮರಾವತಿ ದೇಸಾಯಿ ಮನೆತನದ ಬಾಬಾಸಾಹೇಬ ದೇಸಾಯಿಯವರು ಬ್ರಿಟಿಷರ ಕಾಲದಲ್ಲಿ ಆನರರಿ ಮ್ಯಾಜಿಸ್ಟ್ರೇಟ್‌ರಾಗಿ ಕಾರ್ಯನಿರ್ವಹಿಸಿದ್ದರು. ಪ್ರಸ್ತುತ ರಾಮರಡ್ಡಿ ಸರದೇಸಾಯಿಯವರು ವೃತ್ತಿಯಲ್ಲಿ ವೈದ್ಯರಾಗಿದ್ದು ಸಾರ್ವಜನಿಕರ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಬಂದು ಕಾರ್ಯನಿರ್ವಹಿಸುತ್ತಿದ್ದಾರೆ. ಹುನಗುಂದದ ನಾಗರಾಳ ಮನೆತನದ ದೊಡ್ಡಪ್ಪನವರು ನಾಗರಾಳ ಅವರು ರಾಜಪ್ರಭುತ್ವದ ಪ್ರಭಾವದಿಂದಾಗಿ ಜನಪರ ಕಾರ್ಯಗಳನ್ನು ಮಾಡತೊಡಗಿದರು. ಅಲ್ಲದೇ ಕ್ರಿ.ಶ. ೧೮೯೬-೯೭ರ ಕಾಲಾವಧಿಯಲ್ಲಿ ತಾಲೂಕಿನಾದ್ಯಂತ ಭೀಕರ ಕ್ಷಾಮಬಿದ್ದಾಗ ಜನರಿಗೆ, ಅನ್ನ, ವಸ್ತ್ರ, ದನಕರುಗಳಿಗೆ ಮೇವು ದಾನ ನೀಡಿದ್ದರು. ಇವರ ಸೇವೆಯನ್ನು ಮೆಚ್ಚಿದ ಬ್ರಿಟಿಷ ಸರಕಾರ ಕ್ರಿ.ಶ. ೧೯೦೩ರಲ್ಲಿ ಇವರಿಗೆ ಮೆಚ್ಚುಗೆಯ ಪ್ರಮಾಣಪತ್ರವನ್ನು ನೀಡಿದೆ. ದೊಡ್ಡಪ್ಪನವರು ಹುನಗುಂದದ ಸಹಕಾರ ಸಂಘದ ಅಧ್ಯಕ್ಷರಾಗಿ ಕಾರ್ಯವನ್ನು ನಿರ್ವಹಿಸಿದ್ದರು. (ಕರೂರ ಎಸ್.ಜಿ., ಅಪರೂಪದವರು, ಪು. ೧೫-೧೬). ಶಿಕ್ಷಣಪ್ರೇಮಿಗಳಾದ ದೊಡ್ಡಪ್ಪನವರು ಹುನಗುಂದದಲ್ಲಿ ಕಾಯಕಯೋಗಿ ಮಠದ ಗುರುಗಳ ಸಹಕಾರದೊಂದಿಗೆ ಶಾಲೆಯನ್ನು ಸ್ಥಾಪಿಸಿದರು. ಮುಂದೆ ಸಂಸ್ಥೆಯು ಆರ್ಥಿಕ ತೊಂದರೆಗೀಡಾದಾಗ ಸ್ವತಃ ದೊಡ್ಡಪ್ಪನವರೇ ಹಣದ ಸಹಾಯವನ್ನು ಮಾಡಿ ಸಂಸ್ಥೆ ಬೆಳೆಯಲು ಸಾಧ್ಯವಾಯಿತು. ಚಿತ್ತವಾಡಗಿ ನಾಡಗೌಡರ ಮನೆತನದವರು ಸ್ವಾತಂತ್ರ್ಯ ನಂತರವೂ ರಾಜಕೀಯವಾಗಿ ಬೆಳೆದುಕೊಂಡು ಬಂದವರು. ಈ ಮನೆತನದ ಪರುತಗೌಡರು ಹುನಗುಂದ ತಾಲೂಕಿನ ಶಾಸಕರಾಗಿ ಆಯ್ಕೆಯಾಗಿ ಶಿಕ್ಷಣ, ಅರಣ್ಯ, ನೀರಾವರಿ ಮುಂತಾದ ಕ್ಷೇತ್ರಗಳಲ್ಲಿ ಅಭಿವೃದ್ಧಿಪರ ಕಾರ್ಯಗಳನ್ನು ಮಾಡಿದ್ದಾರೆ. ಕ್ರಿ.ಶ. ೧೯೬೦ರಲ್ಲಿ ಚೀನಾ ಮತ್ತು ಭಾರತದ ನಡುವೆ ಸಮರ ಆರಂಭವಾದಾಗ ಅವಿಭಜಿತ ವಿಜಯಪುರ ಜಿಲ್ಲೆಯಾದ್ಯಂತ ಸಂಚರಿಸಿ ಹಣವನ್ನು ಸಂಗ್ರಹಿಸಿ ಸೇನಾನಿಧಿಗೆ ಸಲ್ಲಿಸಿದರು.

ಕೆಲೂರಿನ ನಾಡಗೌಡ ಮನೆತನದವರು ಸ್ವಾತಂತ್ರ್ಯ ನಂತರವೂ ರಾಜಕೀಯ ರಂಗದಲ್ಲಿದ್ದು ಜನಸೇವೆಯನ್ನು ಮಾಡುತ್ತಲೇ ಸಾಗುತ್ತಿದ್ದಾರೆ. ಈ ಮನೆತನದ ಅಪ್ಪಾಸಾಹೇಬ ನಾಡಗೌಡರ ಧರ್ಮಪತ್ನಿಯಾದ ನಾಗರತ್ನ ಅವರು ೨೦೦೪-೦೫ರಲ್ಲಿ ಬಾಗಲಕೋಟ ಜಿಲ್ಲಾ ಪಂಚಾಯತಿಯ ಅಧ್ಯಕ್ಷರಾಗಿ ಸೇವೆಯನ್ನು ನಿರ್ವಹಿಸಿದ್ದರು. ಗ್ರಾಮದಲ್ಲಿ ಯಾವುದೇ ಕಾರ್ಯಗಳಾದರೂ ನಾಡಗೌಡರ ಮನೆತನದವರು ಇಂದಿಗೂ ಭಾಗವಹಿಸುತ್ತಿರುವುದು ಅವರ ಜನಪರ ಕಾಳಜಿಯನ್ನು ಎತ್ತಿತೋರಿಸುವಂತಿದೆ. ಕಂದಗಲ್ ನಾಡಗೌಡ ಮನೆತನದವರು ಸ್ವತಂತ್ರ ಭಾರತದಲ್ಲಿಯೂ ಈ ಮನೆತನದಲ್ಲಿ ರಾಷ್ಟ್ರಮಟ್ಟದಿಂದ ಗ್ರಾಮೀಣ ಮಟ್ಟದವರೆಗಿನ ರಾಜಕೀಯ ರಂಗದಲ್ಲಿ ಸೇವೆಯನ್ನು ಸಲ್ಲಿಸುತ್ತಲೇ

 ISBN: 978-93-5391-210-9

ಇದ್ದಾರೆ. ಜನರ ನೀರಿನ ಭವಣೆಯನ್ನು ಹೋಗಲಾಡಿಸಲು ಗ್ರಾಮದ ಪೂರ್ವಭಾಗದಲ್ಲಿ ತಮ್ಮ ಹೊಲದಲ್ಲಿಯೇ ಒಂದು ಬಾವಿಯನ್ನು ನಿರ್ಮಿಸಿದ್ದರು. ಕ್ರಿ.ಶ. ೧೯೬೩ರಲ್ಲಿ ಗ್ರಾಮದ ತಮ್ಮ ವಾಡೆಯ ಬಯಲು ಜಾಗೆಯಲ್ಲಿ ಹಿಟ್ಟಿನ ಗಿರಣಿಯನ್ನು ಆರಂಭಿಸಿದ್ದರು. ಆದರೆ ವಿದ್ಯುತ್ ಕೊರತೆಯಿಂದ ಗಿರಣಿ ನಡೆಯಲು ತೊಂದರೆಯಾದಾಗ ಆಯಿಲ್ ಎಂಜಿನ್ ಮೂಲಕ ಗಿರಣಿ ಆರಂಭಿಸಿದರು. ಶಶಿಧರಗೌಡ ನಾಡಗೌಡರು ೧೯೮೭ರಲ್ಲಿ ಜರುಗಿದ ೬ ಗ್ರಾಮಗಳಿಂದ ಕೂಡಿದ ಕಂದಗಲ್ ಮಂಡಳ ಪಂಚಾಯತಿಯ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಗೊಂಡು ೧೯೯೨ರವರೆಗೆ ಪ್ರಧಾನರಾಗಿ ಕಾರ್ಯನಿರ್ವಹಿಸಿದ್ದರು. ಚನ್ನಪ್ಪಗೌಡರ ಧರ್ಮಪತ್ನಿ ಮುಕ್ತಾಬಾಯಿಯು ೨೦೦೬ ರಿಂದ ೨೦೧೧ರವರೆಗೆ ಜಿಲ್ಲಾ ಪಂಚಾಯತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

೬. **ಸಾಹಿತ್ಯ ಮತ್ತು ಶೈಕ್ಷಣಿಕ ಕೊಡುಗೆಗಳು** : ದೇಸಗತಿ ಮನೆತನದವರು ಸಾಹಿತಿಗಳೂ, ಸಾಹಿತಿಗಳಿಗೆ ಆಶ್ರಯದಾತರೂ ಆಗಿದ್ದು, ವಿವಿಧ ಭಾಷೆಗಳಲ್ಲಿ ಹಲವಾರು ಕೃತಿಗಳನ್ನು ರಚಿಸಿ, ಪ್ರಕಟಗೊಳಿಸಿದ್ದಾರೆ. ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಜಾಲಿಹಾಳ ದೇಸಗತಿ ಮನೆತನದ ಮುರಹರಿನಾಯಕರು ಓರ್ವ ಶ್ರೇಷ್ಠ ಸಾಹಿತಿಯಾಗಿದ್ದು, ಸಂಸ್ಕೃತ, ಮರಾಠಿ, ಆಂಗ್ಲ ಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದುಕೊಂಡಿದ್ದರು. ಇವರು ೧೦ ನಾಟಕಗಳನ್ನು ರಚಿಸಿದ್ದರು. ಅವುಗಳಲ್ಲಿ 'ಬಸವಿಯ ಬಾಳು', 'ಸವತಿಯ ಶಾಪ', 'ವಿಧವೆಯ ವಿಧಿ ಕೈವಾಡ', ಮಯ್ಯೂರ ಧ್ವಜ (ಇದೊಂದು ದೊಡ್ಡಾಟ), 'ಅಪರಾಧ ಯಾರು?' ಮುಂತಾದವುಗಳು ಪ್ರಮುಖವಾಗಿವೆ. ಈ ನಾಟಕಗಳ ಮೂಲಕ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬದುಕಿನ ನೆಲೆಯಲ್ಲಿ ಕಂಡುಬರುವ ದೋಷಗಳನ್ನು ದೂರೀಕರಿಸುವ ಮಾರ್ಗೋಪಾಯಗಳ ಕುರಿತಾದ ಕಥಾವಸ್ತುವನ್ನು ಅಳವಡಿಸಿದ್ದಾರೆ. (ಕಲ್ಯಾಣಿ ಸಂಗಪ್ಪ, ಬಾಗಲಕೋಟೆ ಜಿಲ್ಲೆಯ ದೇಸಗತಿಗಳು, ಅಪ್ರಕಟಿತ ಪಿ.ಎಚ್‌ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪು. ೧೩೩-೩೪).

ಕಂದಗಲ್ ನಾಡಗೌಡ ಮನೆತನದ ಅಯ್ಯನಗೌಡ ನಾಡಗೌಡರು ಕಾನೂನು ಪದವಿಧರರಾಗಿದ್ದು ಕ್ರಿ.ಶ. ೧೯೬೭ರ ಅವಧಿಯಲ್ಲಿ ಟಿ.ಡಿ.ಬಿ.ಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತ ಅಂದಿನ ಮುಖ್ಯಮಂತ್ರಿಗಳಾದ ಎಸ್.ಆರ್. ಕಂಠಿಯವರ ಸಹಕಾರದೊಂದಿಗೆ ಕರಡಿ, ಕಂದಗಲ್, ಧನ್ನೂರು ಗ್ರಾಮಗಳಿಗೆ ಪ್ರೌಢಶಾಲೆಗಳನ್ನು ಮಂಜೂರು ಮಾಡುವಲ್ಲಿ ಪ್ರಮುಖಪಾತ್ರ ವಹಿಸಿದ್ದರು. ಅಯ್ಯನಗೌಡರ ಮಗನಾದ ಬಸವರಾಜ ಎಂಬವರು ವಿಜಯಪುರ ಜಿಲ್ಲಾ ಪರಿಷತ್ತದ ಸದಸ್ಯರಾಗಿ ಅವಿಭಜಿತ ವಿಜಯಪುರ ಜಿಲ್ಲೆಯ ವಿವಿಧ ಭಾಗಗಳಿಗೆ ರಸ್ತೆ, ಕುಡಿಯುವ ನೀರು, ಶಾಲಾ ಕಟ್ಟಡಗಳನ್ನು ಹಾಕಿಸಿದ್ದರು. ಚಿತ್ತವಾಡಗಿಯ ನಾಡಗೌಡರಾದ ಪರೂತಗೌಡರು ೧೯೫೨ ರಿಂದ ೧೯೬೭ರವರೆಗೆ ಶಾಲಾ ಮಂಡಳಿಯ ಕಾರ್ಯಾಧ್ಯಕ್ಷರಾಗಿದ್ದಾಗ ಅವಿಭಜಿತ ವಿಜಯಪುರ ಜಿಲ್ಲೆಯಾದ್ಯಂತ ೪೦೦ ಗಾವಟಿ ಶಾಲೆಗಳನ್ನು ಶಾಲಾ ಮಂಡಳಿಯ ನಿಯಂತ್ರಣಕ್ಕೊಳಪಡಿಸಿಕೊಂಡು ಅವುಗಳನ್ನು ಬೆಳೆಸಿದರು. ಅಲ್ಲದೇ ಹುನಗುಂದ, ಇಲಕಲ್‌ಗಳಲ್ಲಿ ಪದವಿ ಮಹಾವಿದ್ಯಾಲಯಗಳ ಸ್ಥಾಪನೆಗೆ ಕಾರಣೀಕರ್ತರು. ಉತ್ತರ ಕರ್ನಾಟಕದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದರು. ಹುನಗುಂದದ ನಾಗರಾಳ ದೊಡ್ಡಪ್ಪನವರ ಗುರುಬಸವಾರ್ಯ ಮಠಗುರುಗಳು ವಿಜಯ ಮಹಾಂತೇಶ ಶಿಕ್ಷಣ ಸಂಸ್ಥೆಗಳ ಬೆಳವಣಿಗೆಗೆ ಮತ್ತು ಉಚಿತ ಪ್ರಸಾದ ನಿಲಯದ ಸ್ಥಾಪನೆಯನ್ನು ಮಾಡಿದರು. ಶಿಕ್ಷಣ ಸಂಸ್ಥೆ ನಡೆಸುವಾಗ ಬರುವ ಆರ್ಥಿಕ ಸಮಸ್ಯೆಗಳಿಗೆ ನಿರಂತರವಾಗಿ ಸ್ಪಂದಿಸುತ್ತಿದ್ದ ಫಲವೇ ಇಂದು ಈ ಶಿಕ್ಷಣ ಸಂಸ್ಥೆ ಹೆಮ್ಮರವಾಗಿ ಬೆಳೆಯಲು ಕಾರಣವಾಗಿದೆ.

೮. **ಧರ್ಮ ಮತ್ತು ಧಾರ್ಮಿಕ ಕೊಡುಗೆಗಳು**

ಧರ್ಮವನ್ನು ರಕ್ಷಿಸಿದರೆ ಧರ್ಮ ನಮ್ಮನ್ನು ರಕ್ಷಿಸುತ್ತದೆ ಎಂಬ ಮಾತಿನಂತೆ ಸ್ಥಳೀಯ ಆಡಳಿತಾಧಿಕಾರಿಗಳಾಗಿದ್ದ ದೇಸಗತಿ ಮನೆತನದವರು ಸರ್ವಧರ್ಮ ಸಮನ್ವಯಿಗಳಾಗಿದ್ದು ಎಲ್ಲಾ ಧರ್ಮಿಯರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು. ಜಾಲಿಹಾಳ ದೇಸಗತಿ ಅಚ್ಯುತನಾಯ್ಕ ದೇಸಾಯಿಯವರು ಅವರಾದಿಯ ಫಲಹಾರೇಶ್ವರ ಶಿವಯೋಗಿಗಳವರ ಬಾಲಲೀಲೆಗಳಿಂದ ಪ್ರಭಾವಿತರಾಗಿ ಅವರನ್ನು ಜಾಲಿಹಾಳಕ್ಕೆ ಆಹ್ವಾನಿಸಿ ಅವರಿಂದ ಆಶೀರ್ವಾದ ಪಡೆದವರಾಗಿದ್ದರು. ಈ ಮನೆತನದ ದೇಸಾಯಿಯವರು ನಶಬಿ ಗ್ರಾಮದ ರೇವಕ್ಕ ಎಂಬ ಗಣಿಕೆಯ ಶೀಲನಿಷ್ಠೆಯನ್ನು ಮೆಚ್ಚಿಕೊಂಡು ಅವಳ ಹೆಸರಿನಲ್ಲಿ ಗುಡಿಯೊಂದನ್ನು ನಿರ್ಮಿಸಿದನಲ್ಲದೇ ಆ ಮನೆಯವರಿಗೆ ಜಮೀನು ಉಂಬಳಿಯಾಗಿ ನೀಡಿದ್ದನು. ಆ ಜಮೀನನ್ನು ಇಂದಿಗೂ ಅವಳ ವಂಶಜರು ಉಳುಮೆ ಮಾಡಿಕೊಳ್ಳುತ್ತಿದ್ದಾರೆ. ಅಲ್ಲದೇ ಹುಡೆ ಕಟ್ಟಡದ ಕಟ್ಟಿತನಕ್ಕಾಗಿ ಪ್ರಾಣತ್ಯಾಗ ಮಾಡಿದ ಕಳ್ಳ ಸಂಜೀವಪ್ಪನ ಸ್ಮರಣೆಗಾಗಿ ಆ ಮನೆಯವರಿಗೆ ೧೨ ಎಕರೆ ಭೂಮಿಯನ್ನು ದಾನವಾಗಿ ಈ ಮನೆತನದವರು ನೀಡಿದ ಮಾಹಿತಿಯು ದೊರೆಯುತ್ತದೆ. (ಬಾಗಲಕೋಟೆ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ದೇವೇಂದ್ರ ಮಾಧವನವರ ಅವರ ಜಾಲಿಹಾಳ ಸಂಸ್ಥಾನ ಎಂಬ ಲೇಖನ, ಪು. ೫೮೯-

 ISBN: 978-93-5391-210-9

೫೮) ಹೊಸ್ಯಾಳದ ದೇಸಗತಿ ಮನೆತನದವರು ಮೂಲತಃ ವೀರಶೈವ ಗಾಣಿಗ ಸಮೂದಾಯಕ್ಕೆ ಸೇರಿದವರು. ಆದರೂ ರಾಜಕೀಯ ಬದಲಾವಣೆಗಳಾದಂತೆ ಕೆಲವು ಮಾರ್ಪಾಡುಗಳನ್ನೂ ಇವರೂ ಮಾಡಿಕೊಂಡಿದ್ದರು. ವಿಜಯಪುರದ ಸುಲ್ತಾನರು ಇವರಿಗೆ ದೇಸಗತಿಯನ್ನು ವಹಿಸಿಕೊಡುವಾಗ ಈ ಮನೆತನದ ಸ್ತ್ರೀಯರಿಗೆ ಬುರ್ಖಾ ಪದ್ಧತಿಯನ್ನು ವಿಧಿಸಲಾಗಿತ್ತು. ಮುಸ್ಲಿಂ ದಂಪತಿಗಳ ಸಹಕಾರದೊಂದಿಗೆ ಮರಳಿ ಅಧಿಕಾರವನ್ನು ಪಡೆದುಕೊಂಡಿದ್ದರಿಂದ ಈ ಮನೆತನದವರು ಮುಸ್ಲಿಂ ಧಾರ್ಮಿಕ ವಿಧಿ ವಿಧಾನಗಳನ್ನು ಆಚರಿಸಿಕೊಂಡು ತಮ್ಮ ಮಕ್ಕಳಿಗೆ ಮುಸ್ಲಿಂ ಪರವಾದ ಹೆಸರುಗಳನ್ನೇ ಇಟ್ಟರು. ಉದಾಹರಣೆ; ಫಕ್ರುಸಾಹೇಬ. ಅಲ್ಲಿಂದ ಮುಂದೆ ಈ ದೇಸಗತಿ ಮನೆತನದವರು ಮುಸ್ಲಿಂ ಸಂಪ್ರದಾಯದ ಪ್ರತಿಯೊಂದು ಹಬ್ಬಗಳಲ್ಲಿಯೂ ಮುಂದಾಳತ್ವವನ್ನು ವಹಿಸಿಕೊಂಡು ಯಶಸ್ವಿಗೊಳಿಸಲಾರಂಭಿಸಿದರು. ಅಲ್ಲದೇ ತಮ್ಮ ಮನೆತನದ ಮಕ್ಕಳನ್ನು ಫಕೀರರನ್ನಾಗಿ ಮಾಡುತ್ತಿದ್ದರು. ಹಿಂದುಗಳಾಗಿದ್ದರೂ ಪರಧರ್ಮಗಳನ್ನೂ ಪಾಲಿಸುತ್ತಿದ್ದರು ಎಂಬುದು ಇದರಿಂದ ತಿಳಿಯಬಹುದಾಗಿದೆ.

ಹುನಗುಂದ ತಾಲೂಕಿನ ಅಮರಾವತಿಯ ರಾಮಪ್ಪ ದೇಸಾಯಿಯವರು ವೀರಶೈವ ಧರ್ಮಾವಲಂಭಿಗಳಾಗಿದ್ದು, ಇಲಕಲ್‌ದ ಚಿತ್ತರಗಿ ಸಂಸ್ಥಾನಮಠದ ಪರಮಭಕ್ತರಾಗಿದ್ದರು. ೧೫ನೆಯ ಪೀಠಾಧಿಕಾರಿಗಳಾದ ಶ್ರೀಗುರು ಮಹಾಂತಸ್ವಾಮಿಗಳು ಲಿಂಗೈಕ್ಯರಾದಾಗ ದೇಸಾಯಿಯವರು ಉತ್ತರಾಧಿಕಾರಿಗಳನ್ನು ಅರಸುತ್ತ ಬಳ್ಳಾರಿಗೆ ಆಗಮಿಸಿದರು. ಅಲ್ಲಿರುವ ಸಕ್ಕರೆ ಕರಡೆಪ್ಪನವರ ಬಳಿಗೆ ಹೋಗಿ ಅವರ ಸಹಾಯದಿಂದ ಕರಡೆಪ್ಪನವರ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಯನ ಮಾಡುತ್ತಿದ್ದ ವೀರಯ್ಯ ಮತ್ತು ಗೌರಮ್ಮ ದಂಪತಿಗಳ ಮಗನಾದ ಮಳಿಯಪ್ಪನವರನ್ನು ಮಠಕ್ಕೆ ಬರಬೇಕೆಂದು ಮನವಿ ಮಾಡಿಕೊಂಡರು. ಆರಂಭದಲ್ಲಿ ನಿರಾಕರಿಸಿದ ಮಳಿಯಪ್ಪಯ್ಯನವರು ಮುಂದೆ ಕೆಲವು ದಿನಗಳ ಅಂದರೆ ಕ್ರಿ.ಶ. ೧೮೭೪ರಲ್ಲಿ ಇಲಕಲ್‌ಗೆ ಬಂದು ಮಠದ ಜವಾಬ್ದಾರಿಯನ್ನು ವಹಿಸಿಕೊಂಡರು. ಅಂದಿನಿಂದ ಇವರಿಗೆ ವಿಜಯ ಮಹಾಂತೇಶ ಶಿವಯೋಗಿಗಳು ಎಂದು ಹೆಸರನ್ನು ಪಡೆದು ನಾರದ ಗಡ್ಡೆಯ ತಾತನವರಿಂದ ಮಂತ್ರೋಪದೇಶ ಪಡೆದುಕೊಂಡರು. ಶೈವ ಮತಾವಲಂಭಿಗಳಾದ ರಾಮಪ್ಪನವರು ಮುಸ್ಲಿಂ-ಹಿಂದೂಗಳ ಧರ್ಮಗಳ ಧಾರ್ಮಿಕ ಕಾರ್ಯಗಳಲ್ಲಿಯೂ ಭಾಗವಹಿಸುತ್ತಿದ್ದರು. ಕೆಲೂರು ದೇಸಗತಿ ಮನೆತನದವರು ಕಾಲಾಂತರದಿಂದ ಮೋಹರಂ ಹಬ್ಬದಲ್ಲಿ ಈ ಮನೆಯಿಂದಲೇ ಅಗ್ನಿ, ಶರಬತ್ ಕೊಡ ಹಾಗೂ ಪಂಜುಗಳು ಹೋಗುವುದು ಸಂಪ್ರದಾಯ. ಆ ಸಂಪ್ರದಾಯವನ್ನು ಇಂದಿನ ನಾಡಗೌಡರೂ ಸಹ ಮುಂದುವರೆಸಿಕೊಂಡು ಹೋಗುತ್ತಿರುವುದು ಅವರ ಸಾಮರಸ್ಯದ ಜೀವನಕ್ಕೆ ಸಾಕ್ಷಿಯಾಗಿದೆ. ಕಂದಗಲ್ ನಾಡಗೌಡರು ಧಾರ್ಮಿಕ ಕಾರ್ಯಗಳಲ್ಲಿ ಸ್ವತಃ ಭಾಗಿಗಳಾಗುತ್ತಿದ್ದರು ಆ ಸಂಪ್ರದಾಯ ಇಂದಿಗೂ ಮುಂದುವರೆದಿದೆ. ದೇವಾಲಯಗಳ ಜಾತ್ರೆಯ ಸಂದರ್ಭದಲ್ಲಿ ತೇರಿನ ಕಳಸ ನಾಡಗೌಡರ ಮನೆಯಿಂದಲೇ ದೇವಾಲಯಕ್ಕೆ ತೆಗೆದುಕೊಂಡು ಹೋಗುವ ಸಂಪ್ರದಾಯವಿದೆ. ಮುಸ್ಲಿಂರ ಮೋಹರಂ ಹಬ್ಬದ ಕತ್ತಲರಾತ್ರಿಯ ದಿನದಂದು ಮಸಿದೆಯಿಂದ ಬಂದ ಡೋಲಿ ನಾಡಗೌಡರ ಮನೆಯಲ್ಲಿ ಮೊದಲ ಪೂಜಾರ್ಚನೆ ಮಾಡಿಸಿಕೊಂಡು ನಾಡಗೌಡರ ಬಾವಿಯಲ್ಲಿಯೇ ಕೊನೆಯ ಚಟುವಟಿಕೆಗಳು ನಡೆಯುವುದುಂಟು.

**೯. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗ**

ಬಾಗಲಕೋಟೆ ಜಿಲ್ಲೆಯ ದೇಸಗತಿ ಮನೆತನದವರು ಬ್ರಿಟಿಷ ಕಾಲದ ವಿವಿಧ ಆಡಳಿತಾತ್ಮಕ ಹುದ್ದೆಗಳನ್ನು ಪಡೆದುಕೊಂಡು ಅವರ ಆಡಳಿತಕ್ಕೆ ಬೆನ್ನೆಲುಬಾಗಿ ನಿಂತುಕೊಂಡಿದ್ದರೂ ಸಹ ನಾಡಿನ ಸ್ವತಂತ್ರಕ್ಕಾಗಿಯೂ ದೇಶಾಭಿಮಾನಿಗಳನ್ನು ಹುರುದುಂಬಿಸುತ್ತಿದ್ದರು. ಅಲ್ಲದೇ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದ ಕಿಡಿ ಹೊತ್ತಿದ್ದೇ ದೇಸಗತಿ ಕುಟುಂಬದವರಿಂದ ಎಂಬುದನ್ನು ಮರೆಯುವಂತಿಲ್ಲ ಅದಕ್ಕೆ ಬಾಗಲಕೋಟೆ ಜಿಲ್ಲೆಯೂ ಹೊರತಾಗಿಲ್ಲ. ಜಮಖಂಡಿ ಸಂಸ್ಥಾನದ ರಾಮಚಂದ್ರರಾವ್ ಅಪ್ಪಾಸಾಹೇಬ ಅವರು ೧೮೫೩ರಲ್ಲಿ ಜಮಖಂಡಿ ಸಂಸ್ಥಾನದ ಅಧಿಕಾರವನ್ನು ವಹಿಸಿಕೊಂಡರು. ಇವರು ಅಧಿಕಾರಕ್ಕೆ ಬಂದ ನಾಲ್ಕು ವರ್ಷದದಲ್ಲಿ ಭಾರತದ ವಿವಿಧ ಮೂಲೆಗಳಲ್ಲಿ ೧೮೫೭ರ ಸಿಪಾಯಿ ದಂಗೆಯ ಕಾವು ಏರತೊಡಗಿತ್ತು ಅದರ ಬಿಸಿ ಕರ್ನಾಟಕದವರೆಗೂ ಬೀಸಿತು. ಅದು ಜಮಖಂಡಿಗೂ ತಗುಲಿತು. ಇದೇ ಅವಧಿಯಲ್ಲಿ ಮುಧೋಳ ಸಂಸ್ಥಾನದ ಹಲಗಲಿಯಲ್ಲಿ ಬೇಡರು ಬ್ರಿಟಿಷ್ ವಿರೋಧಿ ಬಂಡಾಯ ಆರಂಭಿಸಿದ್ದರು. ಆಗ ಬೇಡರು ಮತ್ತು ಅಪ್ಪಾಸಾಹೇಬರ ಸೇನಾಪತಿ ಭೋಟುಸಿಂಗ್ ಕಂಪನಿಯ ವಿರುದ್ಧ ಬೇಡರಿಗೆ ಬೆಂಬಲಿಗನಾಗಿ ಹೋರಾಟಕ್ಕಿಳಿದನು. ಇದರೊಂದ ಬ್ರಿಟಿಷರು ಇದಕ್ಕೆಲ್ಲಾ ಅಪ್ಪಾಸಾಹೇಬರ ಬೆಂಬಲವಿದೆ ಎಂದು ಅವರನ್ನು ಬಂದಿಸಿದಾಗ ಸ್ವತಃ ಭೋಟಾಸಿಂಗ್ ಬಂಡಾಯಕ್ಕೆ ನಾನು ಕಾರಣವೆಂದು ಬಂದನಕ್ಕೊಳಗಿ ಗಲ್ಲುಶಿಕ್ಷೆಗೆ ಗುರಿಯಾದನು (ಬಾಗಲಕೋಟೆ ಜಿಲೆಯ ಇತಿಹಾಸ ಮತ್ತು ಪುರಾತತ್ವ, ಪು. ೬೦೬).

 ISBN: 978-93-5391-210-9

ಹುನಗುಂದದ ಹವಾಲ್ದಾರ ಸಂಗಪ್ಪನವರ ಮಗನಾದ ಈಶ್ವರಪ್ಪನವರ ಮೇಲೆ ಸ್ವಾತಂತ್ರ ಹೋರಾಟದ ಕಾವು ತಗುಲಿ ಹೋರಾಟದಲ್ಲಿ ಧುಮುಕಿದರು. ನಗರದ ಬಸಟೆಪ್ಪ ಬಳೂಟಗಿ, ದಾನಪ್ಪ ರಾಜಮನಿ, ರಾಘವೇಂದ್ರರಾವ್ ದೇಸಾಯಿ, ಮಧ್ವರಾವ್ ಪ್ಯಾಟಿ ಮುಂತಾದವರ ಹೋರಾಟದ ಪ್ರಭಾವ ಇವರ ಮೇಲೆ ಬಿತ್ತು. ಕಾರಣ ಈಶ್ವರಪ್ಪನವರು ಇವರೊಂದಿಗೆ ಸೇರಿಕೊಂಡು ಬಂಗಾಳ ವಿಭಜನೆ, ಉಪ್ಪಿನ ಸತ್ಯಾಗ್ರಹ, ಕರನಿರಾಕರಣ ಚಳುವಳಿ, ಅರಣ್ಯ ಸತ್ಯಾಗ್ರಹದಂತಹ ಚಳುವಳಿಗಳಲ್ಲಿ ಭಾಗವಹಿಸಿ ನಾಡು ಸ್ವಾತಂತ್ರ್ಯ ಪಡೆಯಲು ಹೋರಾಡಿದರು. ಹೀಗೆ ಹವಾಲ್ದಾರ ಮನೆತನವು ಕೇವಲ ಆಡಳಿತಾತ್ಮಕವಾಗಿ ಅಲ್ಲ, ನಾಡಿನ ಸರ್ವತೋಮುಖ ಬೆಳವಣಿಗೆಗೆ ಸದಾ ಶ್ರಮಿಸುತ್ತಿತ್ತು ಎಂಬುದು ಸಂಶೋಧನಾ ಅಧ್ಯಯನದಿಂದ ತಿಳಿದುಬರುವುದು. ಅದರಂತೆ ಮರೋಳದ ದೇಶಮುಖರ ರಾಜಪುರೋಹಿತರಾಗಿ ಸೇವೆ ಮಾಡುತ್ತಿದ್ದ ಹನುಮಂತಾಚಾರ್ಯ ಜೋಶಿಯವರು, ಮಲ್ಲಭೂಪಾಲರ ಸಹೋದರನ ಬಸಪ್ಪನ ಮಗ ಗಣಪ್ಪ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಹಲವಾರು ಸಲ ಸೆರೆಮನೆ ವಾಸದ ಶಿಕ್ಷೆಯನ್ನು ಅನುಭವಿಸಿದನು. ಹೀಗೆ ಮರೋಳದ ದೇಸಮುಖರು ದೇಸಗತಿ ಜವಾಬ್ದಾರಿಯ ಜೊತೆಗೆ ಭಾರತಾಂಬೆಯನ್ನು ಆಂಗ್ಲರ ಕಪಿಮುಷ್ಠಿಯಿಂದ ಮುಕ್ತಗೊಳಿಸಲು ತಮ್ಮ ಸಹೋದರನ ಮಗ ಹಾಗೂ ತಮ್ಮ ಪುರೋಹಿತ ಹಣಮಂತ ಆಚಾರ್ಯ ಜೋಶಿಯವರಿಗೆ ಬೆಂಬಲಿಸಿದ್ದು ಸ್ಮರಣೀಯ.

೧೦. **ವಾಸ್ತು-ಶಿಲ್ಪಕಲೆ :**

ತೇರದಾಳದ ನೇಮಿನಾಥ ಬಸದಿಯ ನೇಮಿನಾಥ ಪ್ರತಿಮೆಯ ಪೀಠದ ಮೇಲೆ ಬರೆಯಲಾದ ಕ್ರಿ.ಶ. ೧೮ನೆಯ ನವೆಂಬರ ೧೭೪೪ರ ಕಾಲದ ಶಾಸನದಲ್ಲಿ ತೇರಿದಳದ ದೇಸಾಯಿ ಸತ್ಯವ್ವ ಹಾಗೂ ಆಕೆಯ ಮಗನಾದ ಜಕ್ಕಪ್ಪ ಸೇರಿ ಗೊಂಕ ಜೀನಾಲಯದಲ್ಲಿ ನೇಮಿನಾಥ ಸ್ವಾಮಿ ತೀರ್ಥಂಕರನ ಪ್ರತಿಷ್ಠಾಪನೆ ಮಾಡಿಸಿದ ಉಲ್ಲೇಖವಿದೆ. (ಕನ್ನಡ ವಿಶ್ವವಿದ್ಯಾಲಯ, ಹಂಪಿ ಶಾಸನ ಸಂಪುಟ-೯, ಜಮಖಂಡಿ ನಂ. ೨, ಪು. ೯೦-೯೧). ಕರಕಲಮಟ್ಟಿ ದೇಸಾಯಿಯರು ಗ್ರಾಮದ ಪ್ರವೇಶ ಭಾಗದಲ್ಲಿಯೇ ಸುಂದರವಾದ ವಿಶಾಲವಾದ ವಾಡೆಯನ್ನು ನಿರ್ಮಿಸಿರುವುದು ಅವರ ಕಲಾ ವೈಭವಕ್ಕೆ ಸಾಕ್ಷಿಯಾಗಿದೆ. ಇಂದಿಗೂ ಈ ವಾಡೆಯ ವೈಭವದಿಂದ ಆಕರ್ಷಿತರಾದ ಚಲನಚಿತ್ರ ನಿರ್ದೇಶಕರು ಹುಲಿಯಾ, ವೀರಮದಕರಿ ಮುಂತಾದ ಚಲನಚಿತ್ರಗಳ ಮೂಲಕ ವಾಡೆಯ ವೈಭವವನ್ನು ನಾಡಿನ ಜನರಿಗೆ ಪರಿಚಯಿಸಿದ್ದಾರೆ. ಹೊನ್ಯಾಳದ ದೇಸಾಯಿಗಳು ಕಲೆಯ ಆರಾಧಕರಾಗಿದ್ದು ಈ ಮನೆತನದ ಹಣಮಂತಗೌಡರ ಮಗನಾದ ಅಪ್ಪಾಸಾಹೇಬನು ಐದು ಎಕರೆ ವಿಶಾಲವಾದ ಜಾಗೆಯಲ್ಲಿ ಒಂದು ಬೃಹತ್ ವಾಡೆಯನ್ನು ನಿರ್ಮಿಸಿದನು. ಬಾಗಲಕೋಟೆಯಲ್ಲಿ ಬಸನಗೌಡರು ದುರಗಮ್ಮ ದೇವಾಲಯದ ನಿರ್ಮಾಣಕ್ಕೆ ಕಾರಣೀಭೂತರಾದರು. ಅಲ್ಲದೇ ಸಂಗಪ್ಪ ದೇಸಾಯಿಯರು ತಮ್ಮ ವಾಡೆಯ ಮುಂದೆಯೇ ಮುಸಲ್ಮಾನ ಪ್ರಾರ್ಥನೆಗಾಗಿ ಮಸೀದಿಯೊಂದನ್ನು ಕಟ್ಟಿಸಿದ್ದರಲ್ಲದೇ ಅವರ ಹಬ್ಬಗಳಿಗೂ ಪ್ರೋತ್ಸಾಹಿಸುತ್ತಿದ್ದರು. (ನಾಗಣ್ಣವರ ಎಸ್.ಆರ್. (ಸಂ.), ದೇಸಗತಿ ಮನೆತನಗಳ ಕೊಡುಗೆಗಳು, ಪು. ೧೦೬-೧೧೨. ಕುಲಕರ್ಣಿ ಡಿ.ಜಿ. ಸಂಶೋಧನ ಲೇಖನ). ಭವ್ಯ ಪರಂಪರೆಯನ್ನು ಸಾರುವ ಸುಂದರವಾದ ಹೊನ್ಯಾಳದ ವಾಡೆ ಆಲಮಟ್ಟಿ ಹಿನ್ನೀರಿನಿಂದ ಕೃಷ್ಣಾನದಿಯ ಮಡಿಲನ್ನು ಸೇರಿತು. ಕಲಾತ್ಮಕವಾಗಿ ನಿರ್ಮಾಣಗೊಂಡಿರುವ ಈ ಸುಂದರ ಅರಮನೆಯಂತಿರುವ ವಾಡೆಯನ್ನು ಇಂದು ಟಿ.ಎಸ್.ನಾಗಾಭರಣರು ನಿರ್ದೇಶಿಸಿದ ಗಿರೀಶ ಕಾರ್ನಾಡ ಅವರ 'ನಾಗಮಂಡಲ' ಚಲನಚಿತ್ರದಲ್ಲಿ ನೋಡಿ ಸಂತೋಷಪಡಬೇಕಷ್ಟೇ. ಕಂದಗಲ್‌ದ ನಾಡಗೌಡರು ಧರ್ಮಸಹಿಷ್ಣುಗಳಾದ ನಾಡಗೌಡರು ವೀರಭದ್ರ ದೇವಾಲಯ ಹಾಗೂ ಚೌಡಮ್ಮ ದೇವಾಲಯದ ನಿರ್ಮಾಣಕ್ಕೆ ಭೂಮಿಯನ್ನು ದಾನವಾಗಿ ನೀಡಿದ್ದರು. ಪ್ರಸ್ತುತ ಅವಧಿಯಲ್ಲಿಯೂ ಐತಿಹಾಸಿಕ ದೇವಾಲಯಗಳ ಜೀರ್ಣೋದ್ಧಾರದ ಜವಾಬ್ದಾರಿಯನ್ನು ವಹಿಸಿಕೊಂಡು ಕಾರ್ಯವನ್ನು ಪೂರ್ಣಗೊಳಿಸಿದ್ದಾರೆ.

೧೧. **ಸಮಾರೋಪ**

ಒಟ್ಟಾರೆ ಸ್ಥಳೀಯ ಆಡಳಿತಗಾರರಾಗಿ ಆದಿಲ್‌ಷಾಹಿಗಳು, ಪೇಶ್ವೆಗಳು, ಬ್ರಿಟಿಷರ ಕಾಲದಲ್ಲಿ ಕಾರ್ಯನಿರ್ವಹಿಸಿದ ದೇಸಾಯಿಗಳು, ದೇಸಮುಖರು, ಸರದೇಸಾಯಿಗಳು, ನಾಡಗೌಡರು, ಹವಾಲ್ದಾರರು ಮುಂತಾದ ದೇಸಗತಿ ಮನೆತನದ ಪ್ರಮುಖರು ನಾಡಿನ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದರು. ಭಾರತದ ಮೇಲೆ ದಬ್ಬಾಳಿಕೆ ಮಾಡುತ್ತಿದ್ದ ಬ್ರಿಟಿಷರನ್ನು ಹೊಡೆದೋಡಿಸಲೂ ಈ ದೇಸಗತಿ ಕುಟುಂಬದ ಸದಸ್ಯರು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಭಾಗವಹಿಸಿದ್ದರು. ಅಲ್ಲದೇ ಇಂದಿಗೂ ಸಹ ದೀಪಾವಳಿ, ಮಹಾನವಮಿ, ಕಾರಹುಣ್ಣಿಮೆ ಅಷ್ಟೇ ಅಲ್ಲ ಇಸ್ಲಾಮಿಕ್ ಹಬ್ಬಗಳಾದ ಮೋಹರಂ, ಬಕ್ರೀದ್ ಗಳಲ್ಲಿ ಮೊದಲು ದೇಸಗತಿ ಕುಟುಂಬದವರ ಪೂಜಾ ನಂತರವೇ ಧಾರ್ಮಿಕ ಕಾರ್ಯಕ್ರಮಗಳು ಜರುಗುತ್ತಿರುವುದನ್ನು ಕಾಣಬಹುದಾಗಿದೆ. ಅಲ್ಲದೇ ಪ್ರಸ್ತುತ ರಾಜಕೀಯದಲ್ಲಿಯೂ

 ISBN: 978-93-5391-210-9

ಜಿಲ್ಲೆಯ ಹಲವಾರು ದೇಸಗತಿ ಮನೆತನದ ಸದಸ್ಯರು ಗ್ರಾಮಪಂಚಾಯತಿಯಿಂದ ಮೊದಲ್ಗೊಂಡು ನಾಡಿನ ರಾಜಕೀಯದಲ್ಲಿಯೂ ಪ್ರವೇಶಿಸಿದ್ದು. ಹಲವಾರು ಜನಪರ ಕಾರ್ಯಗಳ ಮೂಲಕ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ.

* ಈ ಸಂಶೋಧನ ಪ್ರಬಂಧದ ರಚನೆಯಲ್ಲಿ ಕಲ್ಯಾಣಿ ಸಂಗಮೇಶ ಅವರ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಬಾಗಲಕೋಟೆ ಜಿಲ್ಲೆಯ ದೇಸಗತಿಗಳು ಎಂಬ ಮಹಾಪ್ರಬಂಧದಿಂದ ಹೆಚ್ಚಿನ ಮಾಹಿತಿಯನ್ನು ಪಡೆಯಲಾಗಿದೆ. ಕಾರಣ ಮೊದಲು ಸಂಗಮೇಶ ಕಲ್ಯಾಣಿ ಸರ್ ಅವರಿಗೆ ಕೃತಜ್ಞತೆಗಳು.

**ಆಧಾರ ಗ್ರಂಥಗಳು**


೧. ಕಲ್ಯಾಣಿ ಸಂಗಮೇಶ, ಬಾಗಲಕೋಟೆ ಜಿಲ್ಲೆಯ ದೇಸಗತಿಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಸೀಗಿಹಳ್ಳಿ ಬಾಳಣ್ಣ (ಸಂ.), ಬೆಳಗಾವಿ ಜಿಲ್ಲೆಯ ವೀರಶೈವ ದೇಸಗತಿಗಳು, ವೀರಶೈವ ಅಧ್ಯಯನ ಸಂಸ್ಥೆ, ಡಂಬಳ-ಗದಗ, ೧೯೮೯.

೩. ಗೋಪಾಲ ಆರ್ (ಸಂ.), ಬಾಗಲಕೋಟೆ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೧೧.

೪. ದೇವಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೯. ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೬.

೫. ಕರೂರ. ಎನ್.ಜಿ., ಅಪರೂಪದವರು, ಬಿ.ವಿ.ವಿ. ಸಂಘದ ವೈರಾಗ್ಯ ಮಲ್ಲಣಾರ್ಯ ಪ್ರಕಾಶನ ಬಾಗಲಕೋಟ, ೨೦೦೨.

೬. ಶೇಖದಾರ್ ಪಿ.ಎಸ್, ವಿಜಾಪುರ ಜಿಲ್ಲೆಯ ದೇಸಗತಿಗಳು, ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೭. ನಾಗಣ್ಣವರ ಎಸ್.ಆರ್. (ಸಂ.), ದೇಸಗತಿ ಮನೆತನಗಳ ಕೊಡುಗೆಗಳು, ವಿಚಾರ ಸಂಕಿರಣದ ಕೈಪಿಡಿ, ೨೦೧೬.

೮. ವಿಜಯಪುರ ಜಿಲ್ಲಾ ಗ್ಯಾಜೇಟಿಯರ್.


*****

 ISBN: 978-93-5391-210-9

ISBN 978-93-5391-210-9




